ಕನ್ನಡ ಮತ್ತು ಸಂಸ್ಕೃತಿ ಇಲಾಖೆ

**ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ**

## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

# ರಾಮಸ್ವಾಮಿ ವೃತ್ತ


ಪ್ರಧಾನ ಸಂಪಾದಕರು

**ಡಾ. ಬಿ.ವಿ. ವಸಂತಕುಮಾರ್**

ಸಂಪಾದಕರು

**ಡಾ. ಎಸ್. ಜಿ. ರಾಮದಾಸ ರೆಡ್ಡಿ**

ಲೇಖಕರು

**ಮಂಜುನಾಥ ಎಚ್.ಎಲ್.**



**ಕರ್ನಾಟಕ ಸಾಹಿತ್ಯ ಅಕಾಡೆಮಿ**

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–೫೬೦ ೦೦೨

ದೂರವಾಣಿ: ೦೮೦–೨೨೨೧೧೭೫೦ / ೨೨೧೦೬೪೬೦

www.karnatakasahithyaacademy.org

ಇ–ಮೇಲ್: sahithya.academy@gmail.com

**RAMASWAMY VRUTHA:** An Introduction Book on Places in Karnataka that Played a Major Role in the Freedom Struggle, Written by Manjunath H. L., Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
೧. ಡಾ. ಎಸ್. ಜಿ. ರಾಮದಾಸ ರೆಡ್ಡಿ
೨. ಡಾ. ಮೃತ್ಯುಂಜಯ ರುಮಾಲೆ
೩. ಶ್ರೀ ನರೇಂದ್ರಕುಮಾರ್ ಎಸ್.ಎಸ್.
೪. ಡಾ. ಪ್ರಕಾಶ ಗ. ಖಾಡೆ
೫. ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಣ : ೨೦೨೨
ಪ್ರತಿಗಳು : ೧೦೦೦
ಬೆಲೆ : ರೂ. ೩೦/–
ಪುಟ : ೬೪

ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್


ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೬೫೮೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ವಿಧಾನಸೌಧ
ಬೆಂಗಳೂರು–560 001

ಸ್ವಾತಂತ್ರ್ಯದ ಅಮೃತಮಹೋತ್ಸವ



ಕರ್ನಾಟಕ ಸರ್ಕಾರ

# ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಸ್ವಾತಂತ್ರ್ಯದ ಅಮೃತಮಹೋತ್ಸವ

ಇಂಧನ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು



## ಶುಭ ಸಂದೇಶ

**'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ'**

ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.

**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

## ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಫಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು.



ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ, ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**
ಅಧ್ಯಕ್ಷರು

# ಲೇಖಕರ ಮಾತು

ಭಾರತವು ಜಗತ್ತಿನಲ್ಲಿಯೇ ಒಂದು ಸರ್ವಸ್ವತಂತ್ರ ಮತ್ತು ಸಾರ್ವಭೌಮ ರಾಷ್ಟ್ರವಾಗಿದೆ.ಇಂತಹ ಭವ್ಯಪರಂಪರೆಯ ಇತಿಹಾಸವಿರುವ ಭಾರತದಲ್ಲಿ ಪರಕೀಯರಾದ ಬ್ರಿಟಿಷರ ದಾಸ್ಯದಿಂದ ಬಿಡುಗಡೆಗೊಳ್ಳಲು ನಡೆಸಿದಂತಹ ರಾಷ್ಟ್ರೀಯ ಚಳುವಳಿಯು ಒಂದು ಸ್ಮರಣಾರ್ಹ ಮತ್ತು ಸ್ಫೂರ್ತಿದಾಯಕವಾಗಿರುವ ಘಟನೆ. ೧೯೪೭ರವರೆಗೆ ನಡೆದಿರುವ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಹಾಸ್ರಾರು ಸ್ವಾತಂತ್ರ್ಯ ಹೋರಾಟಗಾರರು ಮಡಿದಿದ್ದಾರೆ. ೧೯೨೦ರ ದಶಕದಲ್ಲಿ ಗಾಂಧೀಜಿಯ ನೇತೃತ್ವದಲ್ಲಿ ಅಸಂಖ್ಯಾತ ಜನರು ಸೇರಿ ಆಂಗ್ಲರ ದಾಸ್ಯದಿಂದ ಮುಕ್ತಿ ಪಡೆಯಲು ಶಾಂತಿಯುತ ಮತ್ತು ಅಹಿಂಸಾತ್ಮಕ ಮಾದರಿಯಲ್ಲಿ ಹೋರಾಟ ನಡೆಸಿದರು, ಈ ಹೋರಾಟದಲ್ಲಿ ಲಕ್ಷೋಪಲಕ್ಷ ಜನ ಕನ್ನಡನಾಡಿನಿಂದಲೂ ಭಾಗವಹಿಸಿದರು, ಅದರಲ್ಲಿ ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಹೋರಾಟದಲ್ಲಿ ಮೈಸೂರಿನಲ್ಲಿರುವ ರಾಮಸ್ವಾಮಿ ವೃತ್ತದ ಪ್ರಕರಣವೂ ಕೂಡ ಒಂದು ಮಹತ್ವದ ಸ್ಥಾನವನ್ನು ಪಡೆದುಕೊಂಡಿದೆ, ಇಲ್ಲಿಯ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಕೂಡಿಕೊಂಡು ರೂಪಿಸಿರುವುದೇ ಆಗಿದೆ. ಭಾರತದಲ್ಲಿ ಎರಡು ಬಹು ದೊಡ್ಡ ಜನಸಮೂಹಗಳ ಗುಂಪಗಳನ್ನು ಗುರುತಿಸಬಹುದು. ಒಂದು ಶ್ರಮಜೀವಿ ಕಾರ್ಮಿಕ ವರ್ಗ ಮತ್ತೊಂದು ಜ್ಞಾನಾರ್ಜನೆಯ ವಿದ್ಯಾರ್ಥಿ ವರ್ಗ. ಈ ಜ್ಞಾನಾರ್ಜನೆಯ ವಿದ್ಯಾರ್ಥಿ ವರ್ಗವೂ ಮೈಸೂರಿನಲ್ಲಿ ೧೯೪೭ ರ ಆಗಸ್ಟ್ ೧೫ ರ ಅನಂತರವೂ ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ ರಚನೆಗಾಗಿ ಚಳವಳಿಯನ್ನು ಮಾಡಿತು. ಇಂತಹ ಅನೇಕ ವಿಷಯಗಳನ್ನು ಒಳಗೊಂಡಿರುವ ಕಿರು ಹೊತ್ತಿಗೆ ಇದಾಗಿದೆ.

ಮೈಸೂರು ಸಂಸ್ಥಾನದಲ್ಲಿ ನಡೆದಿರುವ ಮೈಸೂರು ಚಲೋ ಚಳವಳಿಯ ಸಂದರ್ಭದಲ್ಲಿ ಮೈಸೂರು ಮಹಾನಗರದಲ್ಲಿನ ಮಹಾರಾಜ ಕಾಲೇಜು, ಮರಿಮಲ್ಲಪ್ಪ ಪ್ರೌಢಶಾಲೆ ಮತ್ತು ಹಾರ್ಡ್ವಿಕ್ ಶಾಲೆಗಳು ಪ್ರಧಾನ ಪಾತ್ರವನ್ನು ವಹಿಸಿದವು, ಹಾರ್ಡ್ವಿಕ್ ಶಾಲೆಯ ವಿದ್ಯಾರ್ಥಿ ರಾಮಸ್ವಾಮಿ ಪೊಲೀಸರು ನಡೆಸಿರುವ ಗೋಲಿಬಾರಿಗೆ ತುತ್ತಾಗಿ ಸ್ಥಳದಲ್ಲಿಯೇ ಸಾವನ್ನಪ್ಪಿದನು. ಈ ಮಹತ್ವದ ವಿಚಾರಧಾರೆಯನ್ನು ದಾಖಲಿಸಿರುವ ಈ ಕಿರುಹೊತ್ತಿಗೆಯನ್ನು ರಚಿಸುವಲ್ಲಿ ಹೆಚ್ಚಿನ ರೀತಿಯಲ್ಲಿ ಸಹಕಾರವನ್ನು ನೀಡಿದಂತಹ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಿಗೂ, ಕಾರ್ಯದರ್ಶಿಗಳಿಗೂ, ಸಂಚಿಕೆಯ ಸಂಪಾದಕರಾದ ಡಾ. ಎಸ್.ಜಿ. ರಾಮದಾಸ ರೆಡ್ಡಿ ಅವರಿಗೂ ಹಾಗೂ ಡಾ. ಹೆಚ್.ಎನ್. ಕಾಳಸ್ವಾಮಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು. ಡಾ. ಎಂ. ರಾಚಪ್ಪಾಜಿ, ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ, ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ, ಮೈಸೂರು, ಈಚನೂರು ಕುಮಾರ್, ಹಿರಿಯ ಪತ್ರಕರ್ತರರು, ಹುಯಲಾಳು ದೊರೆಸ್ವಾಮಿ, ಹಾರ್ಡ್ವಿವಿಕ್ ಶಾಲೆಯ ಪ್ರಾಂಶುಪಾಲರು, ಡಾ. ಸುಂದರೇಶ್ ಅವರಿಗೆ, ಈ ಹೊತ್ತಿಗೆಯ ಅಕ್ಷರವನ್ನು ಜೋಡಣೆ ಮಾಡಿದ ಮಹಂತೇಶಪ್ಪ ಮತ್ತು ಕರಡು ಪ್ರತಿಯನ್ನು ತಿದ್ದುಪಡಿಮಾಡಿದವರಿಗೆ ಹಾಗೂ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಹಕರಿಸಿದ ಪ್ರತಿಯೊಬ್ಬರಿಗೂ ಈ ಮೂಲಕ ಕೃತಜ್ಞತೆಯನ್ನು ಅರ್ಪಿಸುತ್ತಿದ್ದೇನೆ.

**ಮಂಜುನಾಥ ಹೆಚ್.ಎಲ್**
ಹಿರಿಯ ಸಹಾಯಕ ನಿರ್ದೇಶಕರು
ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ
ವಿಭಾಗೀಯ ಪತ್ರಾಗಾರ ಕಛೇರಿ, ಮೈಸೂರು

## ಪರಿವಿಡಿ


| | |
|---|---|
| ಶುಭ ಸಂದೇಶ | ೩ |
| ಶುಭ ಸಂದೇಶ | ೫ |
| ಪ್ರಧಾನ ಸಂಪಾದಕರ ಮಾತು | ೭ |
| ಲೇಖಕರ ಮಾತು | ೧೧ |
| – ಪ್ರವೇಶಿಕೆ | ೧೫ |
| – ಮೈಸೂರು ಪ್ರದೇಶದಲ್ಲಿ ನಡೆದಿರುವ ಚಳವಳಿಯ ಒಳನೋಟ | ೧೬ |
| – ಮೈಸೂರು ಚಲೋ ಚಳುವಳಿ | ೨೬ |
| – ರಾಮಸ್ವಾಮಿ ವೃತ್ತ | ೩೧ |
| – ಮೈಸೂರು ಚಲೋ ಚಳುವಳಿ ಹೋರಾಟಗಳು | ೩೪ |
| – ಚಳವಳಿಯ ಇತರೆ ಅಂಶಗಳು | ೪೫ |
| – ಪತ್ರಿಕೆಗಳ ಪಾತ್ರ | ೫೫ |
| – ರಾಮಸ್ವಾಮಿ ವೃತ್ತಕ್ಕೆ ಸಂಬಂಧಿಸಿದ ಛಾಯಾಚಿತ್ರಗಳು | ೫೫ |
| ಗ್ರಂಥಸೂಚಿ | ೫೯ |
| ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ | ೬೧ |

# ಪ್ರವೇಶಿಕೆ

ಮಾನವ ಕುಲದ ಚರಿತ್ರೆಯಲ್ಲಿ ೨೦ ನೇ ಶತಮಾನವು ಬಹು ಪ್ರಧಾನವಾಗಿಯೇ ನಿಲ್ಲುವಂತಹ ಒಂದು ಕಾಲಘಟ್ಟವೇ ಆಗಿದೆ. ಭಾರತೀಯ ರಾಷ್ಟ್ರೀಯ ಚಳುವಳಿ ಭಾರತೀಯರನ್ನು ಸಾರ್ವಭೌಮರನ್ನಾಗಿ ಮಾಡುವ, ಸಮಗ್ರ ಜನತೆಯ ಹಿತಾಸಕ್ತಿಗಳಿಗೆ ಸಂಬಂಧಿಸಿದ ಒಂದು ಸಂಘಟಿತ ಸಾಮೂಹಿಕ ಚಳವಳಿಯಾಗಿದೆ. ಬ್ರಿಟಿಷರ ನಮ್ಯತೆ ಮತ್ತು ವಿವಿಧ ಸಂದರ್ಭಗಳಲ್ಲಿ ಅವರ ಹಿಂಸಾತ್ಮಕ ಪ್ರತಿಕ್ರಿಯೆಗಳಿಂದ ಬೆಸತ್ತು ಭಾರತದಲ್ಲಿ ಸ್ವಾತಂತ್ರ್ಯಕ್ಕಾಗಿ ಚಳವಳಿ ಸಂಭವಿಸಿತು.

ಭಾರತದಲ್ಲಿ ಸ್ವಾತಂತ್ರ್ಯಕ್ಕಾಗಿ ನಡೆದಿರುವಂತಹ ಹೋರಾಟಗಳು ರಾಷ್ಟ್ರೀಯತೆಯ ಉದಯಕ್ಕೆ ಕಾರಣವಾದ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಆರ್ಥಿಕ ಅಂಶಗಳ ಸರಣಿಯ ವಿಲೀನವಾಗಿದೆ ಎಂಬುದನ್ನು ಗಮನಿಸಬಹುದು. ಸ್ವಾತಂತ್ರ್ಯ ಪೂರ್ವ ಭಾರತೀಯ ನೆಲದಲ್ಲಿದ್ದಂತಹ ಬ್ರಿಟಿ?ರ ಸಾಮ್ರಾಜ್ಯಶಾಹಿ ಧೋರಣೆಗೆ ಅನುಗುಣವಾಗಿ ರಚನೆಗೊಂಡು ಅವರ ಒಡೆದು ಆಳುವ ನೀತಿಗೆ ಸಿಲುಕಿ ತನ್ನ ನೈಜ ಸ್ವಂತಿಕೆಯನ್ನು ಕಳೆದುಕೊಂಡಿತ್ತು. ಹೀಗೆ ಬ್ರಿಟಿ?ರ ಆಳ್ವಿಕೆಗೆ ಒಳಗಾಗಿದ್ದ ನಮ್ಮ ಭಾರತ ದೇಶವು ಇಬ್ಬಾಗವಾಗಿ, ಬ್ರಿಟಿಷರ ನೌಕರಶಾಹಿ ಆಡಳಿತದಿಂದ ವಿಮುಕ್ತಿ ಹೊಂದಲು ಭಾರತ ದೇಶದಲ್ಲಿ ನಡೆದ ಸ್ವಾತಂತ್ರ್ಯ ಚಳುವಳಿಯೇ ಆಗಿದೆ. ಸ್ವಾತಂತ್ರ್ಯ ಹೋರಾಟದ ಪ್ರಧಾನ ಸೇನಾನಿ ಮಹಾತ್ಮಾ ಗಾಂಧೀಜಿ ಅವರ ಧೀಮಂತ ನಾಯಕತ್ವ ನಮಗೆ ದೊರಕದಿದ್ದರೆ ಭಾರತೀಯರಾದ ನಾವು ಇಂದು ಎಲ್ಲಿರುತ್ತಿದ್ದೆವೋ, ಹೇಗಿರುತ್ತಿದ್ದೇವೋ ಎಂಬುದನ್ನು ಊಹಿಸಲು ಸಾಧ್ಯವಿಲ್ಲ. ಇದರ ಭಾಗವಾಗಿ ಸಾಲು ಸಾಲಾಗಿ ನಡೆದಿರುವ ಚಳವಳಿಯನ್ನು ಪ್ರಸ್ತುತ ಲೇಖನದಲ್ಲಿ ದಾಖಲಿಸಲಾಗಿದೆ.

## ಮೈಸೂರು ಪ್ರದೇಶದಲ್ಲಿ ನಡೆದಿರುವ ಚಳವಳಿಯ ಒಳನೋಟ

ಬ್ರಿಟಿಷರು ಭಾರತದಲ್ಲಿ ಆಡಳಿತದ ದೃಷ್ಟಿಯಿಂದಲೇ ಕೆಲವು ಪ್ರಾಂತ್ಯಗಳು ಹಾಗೂ ಆಶ್ರಿತ ಸಂಸ್ಥಾನಗಳು ಎಂದು ವಿಭಾಗಿಸಲ್ಪಟ್ಟಿದ್ದವು. ಅವು ೧೧ ಬ್ರಿಟಿಷ್ ಪ್ರಾಂತ್ಯಗಳು ಹಾಗೂ ೫೭೫ ಕ್ಕೂ ಹೆಚ್ಚು ರಾಜ ಮಹಾರಾಜರ ಸಂಸ್ಥಾನಗಳು ಇದ್ದವು. ಮತ್ತೆ ಭಾರತವನ್ನು ಆಡಳಿತದ ದೃಷ್ಟಿಯಿಂದ ಎರಡು ಭಾಗಗಳಾಗಿ ವಿಂಗಡಿಸಲಾಗಿತ್ತು. ೧) ಬ್ರಿಟಿಷರಿಂದಲೇ ನೇರವಾಗಿ ಆಡಳಿತಕ್ಕೆ ಒಳಪಟ್ಟಿದ್ದ ಬ್ರಿಟಿಷ್ ಭಾರತ ೨) ಬ್ರಿಟಿಷರ ಅಧೀನಕ್ಕೆ ಒಳಪಟ್ಟಿರುವ ರಾಜಮಹಾರಾಜರ ಆಡಳಿತಕ್ಕೆ ಒಳಗಾಗಿದ್ದ ದೇಶಿಯ ಸಂಸ್ಥಾನಗಳು. ರಾಜ–ಮಹಾರಾಜರ ಆಡಳಿತದ ಮೇಲೆ ಉಸ್ತುವಾರಿಯಾಗಿ ಬ್ರಿಟಿಷ್ ಪ್ರಭುತ್ವದಿಂದಲೇ ನೇಮಕಗೊಂಡರು. ರೆಸಿಡೆಂಟರ್‌ಗಳು ಪ್ರತಿಯೊಂದು ರಾಜರ ಸಂಸ್ಥಾನಗಳಲ್ಲಿಯೂ ಕೂಡ ಇವರು ಇರುತ್ತಿದ್ದರು. ಇವುಗಳಲ್ಲಿ ೩೦ ಸಂಸ್ಥಾನಗಳು ಮಾತ್ರ ಸಾಕಷ್ಟು ಭೂವಿಸ್ತೀರ್ಣ, ಜನಸಂಖ್ಯೆ ಹಾಗೂ ಸಂಪನ್ಮೂಲಗಳನ್ನು ಹೊಂದಿದಂತಹ ರಾಜ್ಯಗಳಾಗಿದ್ದವು. ಇವುಗಳಲ್ಲಿ ಮೈಸೂರು ಸಂಸ್ಥಾನವು ಎರಡನೇ ದೊಡ್ಡ ರಾಜ್ಯವಾಗಿತ್ತು.

ಭಾರತ ದೇಶವು ತನ್ನ ೭೫ ನೇ ಸ್ವಾತಂತ್ರ್ಯ ದಿನವನ್ನು ೨೦೨೧ ನೇ ಆಗಸ್ಟ್ ೧೫ ರಂದು ಆಚರಿಸಿ ಕೊಂಡಿದೆ. ಈ ಸಮಯದಲ್ಲಿ ಇಡೀ ಅಖಂಡ ಭಾರತ ದೇಶವು ೧೯೪೭ ರವರೆಗಿನ ಅನೇಕ ಜನರ ತ್ಯಾಗ ಬಲಿದಾನವನ್ನು ಗುರುತಿಸಲಾಗಿದೆ.

ಸ್ವಾತಂತ್ರ್ಯ ಚಳವಳಿಗೆ ಮೈಸೂರು ಸಂಸ್ಥಾನವು ಸಾಕಷ್ಟು ಪ್ರಮಾಣದಲ್ಲಿ ಕೊಡುಗೆಯನ್ನು ನೀಡಿದೆ. ಕನ್ನಡಿಗರು ಶೌರ್ಯ ಮತ್ತು ಧೈರ್ಯಕ್ಕೆ ಬಹಳ ಹೆಸರುವಾಸಿಯಾಗಿದ್ದರು. ತಮ್ಮ ಜೀವನಕ್ಕಿಂತ ಸ್ವಾತಂತ್ರ್ಯ ಹೆಚ್ಚು ಮೌಲ್ಯಯುತವಾಗಿದೆ ಎಂದು ಅಪಾರವಾಗಿಯೇ ನಂಬಿದ್ದರು. ಮೈಸೂರು ಸಂಸ್ಥಾನವು ಹಲವು ವರ್ಷಗಳಿಂದ ವೀರರನಾಡು ಎಂದೂ ಪ್ರಖ್ಯಾತಿಗಳಿಸಿದೆ. ಬ್ರಿಟಿಷರ ಶಕ್ತಿಯೂ ನಿಧಾನವಾಗಿ ಭಾರತದಾದ್ಯಂತ ಹರಡಿದಾಗ, ರಾಜ್ಯದ ಜನರು ಪರಕೀಯರ ಆಡಳಿತ ಮತ್ತು ಅನ್ಯಸಂಸ್ಕೃತಿಯ ಹೇರಿಕೆಯನ್ನು ಸಹಿಸಲಾಗಲ್ಲಿಲ್ಲ. ಆದ್ದರಿಂದಲೇ ಹೈದರ್‌ಅಲಿ, ಮೈಸೂರಿನ ಹುಲಿ ಎಂದು ಬಿರುದನ್ನು ಹೊಂದಿರುವಂತಹ ಟಿಪ್ಪುಸುಲ್ತಾನ್, ಕಿತ್ತೂರು ರಾಣಿ ಚನ್ನಮ್ಮ, ಬೈಲಹೊಂಗಲದ ಸಂಗೊಳ್ಳಿರಾಯಣ್ಣ, ಮುಂಗಡರಗಿಯ ಭೀಮಾರಾವ್ ಮತ್ತು ಇತರ ಅನೇಕ ವೀರರು ಮತ್ತು ಮಹಿಳೆಯರು ಅನೇಕ ನಿರ್ಣಾಯಕ ಯುದ್ಧಗಳನ್ನು ನಡೆಸಿದ್ದಾರೆ.



ದೇಶದ ಚರಿತ್ರೆಯನ್ನು ನಿರ್ಮಾಣ ಮಾಡುವಲ್ಲಿ ಅನೇಕ ವ್ಯಕ್ತಿಗಳು ಪ್ರಧಾನವಾದಂತಹ ಕಾರಣ ಕರ್ತರೇ ಆಗಿದ್ದರು. ಅಂತಹವರು ಮೈಸೂರು ರಾಜ್ಯದಲ್ಲಿಯೂ ಸೃಷ್ಟಿಗೊಂಡಿದ್ದರು. ಅವರಲ್ಲಿ ಮೊದಲನೆಯ ಮಹಾಯುದ್ಧದ ಸಮಯದಲ್ಲಿ ಮೈಸೂರು ಸಂಸ್ಥಾನದಲ್ಲಿ ತಗಡೂರು ರಾಮಚಂದ್ರರಾವ್ ಅವರು ಕ್ರಿಶ್ಚಿಯನ್ ಮಿಷನರಿಗಳಿಂದ ಹಾಗೂ ಸಮಾಜದ ವಿರುದ್ಧ, ಟೀಕೆಗಳ ವಿರುದ್ಧ ತಮ್ಮ ಚಳುವಳಿಯನ್ನು ಆರಂಭಿಸಿದರು.ಆಗ ಮೈಸೂರಿನಲ್ಲಿದ್ದ ತಮ್ಮ ಅಂಗಡಿಯಲ್ಲಿ ಜಲಿಯನ್‌ವಾಲಾಬಾಗ್ ದುರಂತದ ಚಿತ್ರಪಟಗಳನ್ನು ಮಾರಾಟ ಮಾಡಲು ಪ್ರಾರಂಭಿಸಿದರು. ೧೯೧೯ರಲ್ಲಿ ರಾಷ್ಟ್ರೀಯ ಚಳುವಳಿಯು ಜನಜಾಗೃತಿಯ ದಿಕ್ಕಿನಲ್ಲಿ ಒಂದು ಮಹತ್ವದ ಹಾಗೂ ನಿರ್ದಿಷ್ಟವಾದಂತಹ ಕ್ರಿಯಶೀಲ ಚಟುವಟಿಕೆಯೇ ಆಗಿತ್ತು. ಅಂದಿನ ಪರಿಸ್ಥಿತಿ, ಘಟನೆಗಳು, ಒಳಮರ್ಮಗಳು ನಮಗೆ ತಿಳಿಯಲಾರಂಭಿಸಿದವು. ಕಳೆದು ಹೋದ ಕಾಲಘಟ್ಟವನ್ನು ಮತ್ತು ವ್ಯಕ್ತಿಯ ಅಂತರಂಗದ ಅಂದಿನ ಚಲನವಲನವನ್ನು ಕಂಡುಕೊಳ್ಳುವುದರ ಮುಖೇನ ಇಂದಿನ ಸಮಾಜ ಮತ್ತು ಮುಂದಿನ ಭವಿಷ್ಯದ ತಲೆಮಾರಿನವರೆಗೆ ಇಂತಹವರು ದಾರಿ ದೀಪವೇ ಆದರು. ಗಾಣಕ್ಕೆ ಸಿಕ್ಕಂತಹ ಪ್ರತಿಯೊಂದು ಕಾಳು ಎಣ್ಣೆ ಎಂಬ ಫಲ ಕೊಡುವಂತೆ ರಾಷ್ಟ್ರೀಯ ಚಳವಳಿಯಲ್ಲಿ ಲಕ್ಷಾಂತರ ಮಂದಿ ಹೋರಾಟ ನಡೆಸಿದರು. ಪ್ರತಿಯೊಬ್ಬರು ಹಣಕಾಸಿನ ಸೇವೆ, ಬಲಿದಾನದ ಸೇವೆ, ಕಾರಾಗೃಹ ಸೇವೆ, ಸಾಹಿತ್ಯ ರಚನೆಯ ಸೇವೆ ಹಾಗೂ ಮಾನವೀಯತೆಯ ಸೇವೆ ಸಲ್ಲಿಸಿದರು. ಪ್ರತಿಯೊಂದು ಸೇವಾ ಕಾರ್ಯದಲ್ಲಿಯೂ ದೇಶಕ್ಕೆ ಕನ್ನಡನಾಡಿನಿಂದ ಸೇವೆ ಸಲ್ಲಿಸಿ ಮಡಿದಿದ್ದಾರೆ. ಸಹಸ್ರಾರು ಜನ ಭಾಗವಹಿಸಿದ್ದಾರೆ. ಕನ್ನಡನಾಡಿನಿಂದ ರಾಷ್ಟ್ರೀಯ ಚಳವಳಿಯಲ್ಲಿ ಭಾಗವಹಿಸಿ ಹೋರಾಟ ಮಾಡಿದವರೆಲ್ಲರೂ ಮಹತ್ವದ ಉದ್ದೇಶದಿಂದಲೇ ಹೋರಾಡಿದ್ದಾರೆ.

ಭಾರತೀಯ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ್ದ ನಾಯಕರುಗಳಲ್ಲಿ ಮುಖ್ಯರಾದವರು ಬಾಲಗಂಗಾಧರ್ ತಿಲಕ್ ಅವರು ೧೯೨೦ ನೇ ಆಗಸ್ಟ್ ಒಂದರಂದು ಮರಣ ಹೊಂದಿದರು. ಆ ಸಂಧರ್ಭದಲ್ಲಿ ಮೈಸೂರಿನಲ್ಲಿ ಅರ್ಥಪೂರ್ಣವಾಗಿ ಶೋಕಾಚರಣೆಯನ್ನು ನಡೆಸಲಾಯಿತು. ಇದರ

ಪ್ರಯುಕ್ತವಾಗಿ ಅಂಗಡಿ ಮುಗ್ಗಟ್ಟುಗಳನ್ನು ಮುಚ್ಚಲಾಗಿತ್ತು. ಅದೇ ಸಂದರ್ಭದಲ್ಲಿ ಜಿಲ್ಲಾ ನ್ಯಾಯಾಲಯವನ್ನು ಕೂಡ ಮುಚ್ಚುವಂತೆ ಒತ್ತಾಯಿಸಲಾಗಿತ್ತು. ಇದರ ಅಂಗವಾಗಿ ಮೈಸೂರಿನ ಮಹಾರಾಜ ಕಾಲೇಜಿನ ವಿದ್ಯಾರ್ಥಿಗಳ ನೇತೃತ್ವದಲ್ಲಿ ಮರಿಮಲ್ಲಪ್ಪ ಪ್ರೌಢಶಾಲೆ ಮತ್ತು ಇತರೆ ಶಾಲೆಗಳ ಅನೇಕ ವಿದ್ಯಾರ್ಥಿಗಳು ಈ ಶೋಕಾಚರಣೆಯ ಮೆರವಣಿಗೆಯನ್ನು ನಡೆಸಿದರು. ಈ ಶೋಕಾಚರಣೆ ಮೆರವಣಿಗೆಯ ವಿದ್ಯಾರ್ಥಿಗಳ ನೇತೃತ್ವವನ್ನು ಅಂದಿನ ಕಾಲೇಜು ವಿದ್ಯಾರ್ಥಿ ದೇವುಡು ನರಸಿಂಹಸ್ವಾಮಿ, ಮರಿಮಲ್ಲಪ್ಪ ಪ್ರೌಢಶಾಲೆಯ ಪ್ರಾಂಶುಪಾಲರಾಗಿದ್ದ ಎಂ.ವೆಂಕಟಕೃಷ್ಣಯ್ಯ ಅವರು ಪ್ರಮುಖರಾಗಿದ್ದರು. ಹಾಗೆಯೇ ತಗಡೂರು ರಾಮಚಂದ್ರರಾವ್, ಎಂ.ಎನ್. ಜೋಯಿಸ್, ಪಾಲಹಳ್ಳಿ ಸೀತಾರಾಮಯ್ಯ ಮತ್ತು ಅಗರಂ ರಂಗಯ್ಯ ಅವರಂತಹ ಯುವ ನಾಯಕರನ್ನು ರಾಷ್ಟ್ರೀಯ ಚಳವಳಿಯ ಮಹತ್ವದ ಉದ್ದೇಶಕ್ಕಾಗಿ ಕರೆತರುವ ಹೊಣೆಗಾರಿಕೆಯನ್ನು ನೀಡಲಾಗಿತ್ತು.

ಭಾರತೀಯ ಯುವಕರಿಗೆ ಸ್ವಾತಂತ್ರ್ಯ ಚಳವಳಿಯ ಕಾಲ ಘಟ್ಟದಲ್ಲಿ ರಾಜಕೀಯ ಚಳವಳಿಯ ಬಗೆಗೆ ತರಬೇತಿ ನೀಡುವುದು ಮತ್ತು ದೇಶದಾದ್ಯಂತ ಸಾರ್ವಜನಿಕರ ಅಭಿಪ್ರಾಯವನ್ನು ಸಂಗ್ರಹಿಸುವುದು, ಅಲ್ಲಿ ಸಮಿತಿಗಳನ್ನು ರಚಿಸುವುದು ಕಾಂಗ್ರೆಸ್ಸಿನ ನಿಜವಾದ ಗುರಿ ಆಗಿತ್ತು. ಅದಕ್ಕಾಗಿ ಅದರ ನಾಯಕರು ವಾರ್ಷಿಕ ಸಮಾವೇಶಗಳನ್ನು ನಡೆಸುತ್ತಿದ್ದರು. ಅದರಲ್ಲಿ ಹಲವು ವಿಧಾನಗಳನ್ನು ಬಳಸಿ ಅಲ್ಲಿ ಅವರು ಸಮಸ್ಯೆಗಳನ್ನು ಚರ್ಚಿಸಿ ನಿರ್ಣಯಿಸುತ್ತಿದ್ದರು. ರಾಷ್ಟ್ರಮಟ್ಟದಲ್ಲಿ ನಡೆದ ನಾಗ್ಪುರದ ರಾಷ್ಟ್ರೀಯ ಕಾಂಗ್ರೆಸ್ಸಿನ ಸಮಾವೇಶದ ನಂತರ ೧೯೨೩ ರಲ್ಲಿ ಕರ್ನಾಟಕ ರಾಜ್ಯಾದಾದ್ಯಂತ ಮೈಸೂರು ಕಾಂಗ್ರೆಸ್ಸಿನ ಶಾಖೆಗಳನ್ನು ತೆರೆಯಲಾಯಿತು.

ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿಯ ಪ್ರಪ್ರಥಮ ಅಧ್ಯಕ್ಷರಾಗಿ ಎಂ.ವೆಂಕಟಕೃಷ್ಣಯ್ಯ ಅವರು ನೇಮಕ ಗೊಂಡರು. ಮುನ್ಸಿಪಲ್ ಪ್ರದೇಶಗಳಲ್ಲಿ ನಂಜನಗೂಡಿನ ವಿಶ್ವೇಶ್ವರಗೌಡ, ತಗಡೂರಿನ ಟಿ.ಎಸ್.ಸುಬ್ಬಣ್ಣ, ಟಿ.ರಾಮರಾವ್, ಸಿದ್ದೋಜಿರಾವ್ ಮತ್ತು ಟಿ.ನರಸೀಪುರದಲ್ಲಿನ ಟಿ.ಪಿ.ಬೋರಯ್ಯ, ಕ್ರೀಯಶೀಲರಾಗಿ ಇದ್ದಂತಹ ಎನ್.ಶ್ರೀನಿವಾಸ ಅಯ್ಯಂಗಾರ್, ಸಾಲಿಗ್ರಾಮದ ಗಣಪತಿಶಾಸ್ತ್ರಿ ಅಂತಹವರು ಈ ಸಮಿತಿಯಲ್ಲಿ ಕಾರ್ಯನಿರ್ವಹಿಸಿದರು.



೧೯೨೦ ಮತ್ತು ೧೯೩೦ರ ದಶಕದ ಆರಂಭದಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ನಾಯಕರು ಸ್ವಾತಂತ್ರ್ಯ ಸಂಗ್ರಾಮವನ್ನು ಮುನ್ನಡೆಸುವ ಮಹತ್ವದ ಜವಾಬ್ದಾರಿಯನ್ನು ಹೊಂದಿದ್ದರು. ಹಾಗೆಯೇ ಮೈಸೂರು ಭಾಗದಲ್ಲಿ ಕಾಂಗ್ರೆಸ್ ಮತ್ತು ರಾಷ್ಟ್ರೀಯ ಚಳುವಳಿಯನ್ನು ತೀವ್ರ ಗತಿಯಲ್ಲಿ ನಡೆಯಲು ಇಲ್ಲಿನ ಸಾಹುಕಾರ ಡಿ. ಬನುಮಯ್ಯ, ಪಿ.ಎನ್.ಸಂಗಪ್ಪ, ಹೋಟೆಲ್ ಉದ್ಯಮಿ ಆಗಿದಂತಹ ಭದ್ರಿಪ್ರಸಾದ್ ಅವರಂತಹ ಪರೋಪಕಾರಿಗಳು ಹಣವನ್ನು ಹೂಡಿದರು. ೧೯೩೮ ರ ಹೊತ್ತಿಗೆ ಕಾಂಗ್ರೆಸ್ ನಡೆಸಿದ ಶಿವಪುರ ಹೋರಾಟದ ಅನಂತರ ಸ್ವಾತಂತ್ರ್ಯ ಚಳುವಳಿಯು ಮೈಸೂರು ಭಾಗದಲ್ಲಿ ತೀವ್ರ ತರಹದ ಸ್ವರೂಪವನ್ನು ಪಡೆದು ಕೊಂಡಿತು.

ಮೈಸೂರು ರಾಜ್ಯದ ಕೇಂದ್ರ ಸ್ಥಳವಾಗಿರುವ ಮೈಸೂರು ಮಹಾನಗರದಲ್ಲಿ ಭಾರತೀಯ ರಾಷ್ಟ್ರೀಯ ಚಳುವಳಿಯ ಪೂರಕವಾಗಿ ಹಾಗೂ ಅದರ ಒಂದು ಮಹತ್ವದ ಭಾಗವಾಗಿಯೇ ಚಳುವಳಿಗಳು ರೂಪು ಗೊಳ್ಳುತ್ತಿದ್ದವು. ೧೯೨೭ ನೇ ಆಗಸ್ಟ್ ೧೯ ರಂದು ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಖಾದಿಯ ಪ್ರಚಾರಕ್ಕಾಗಿ ಮಹಾತ್ಮಾ ಗಾಂಧೀಜಿ ಅವರು ಮೈಸೂರಿಗೆ ಭೇಟಿ ನೀಡಿದರು ನಂತರ ನಂಜನಗೂಡು ತಾಲ್ಲೂಕಿನ ಬದನವಾಳು ಗ್ರಾಮದಲ್ಲಿರುವ ಖಾದಿ ಉತ್ಪಾದನಾ ಘಟಕಕ್ಕೆ ಬೇಟಿ ನೀಡಿದರು.

ನಂತರ ಭಾರತಕ್ಕೆ ಶಾಸನ ಬದ್ಧ ಆಯೋಗವೇ ಆಗಿರುವಂತಹ ಲಾರ್ಡ್ ಜಾನ್ ಸೈಮನ್ ಅವರ ನೇತೃತ್ವದಲ್ಲಿ ಭಾರತಕ್ಕೆ ಭೇಟಿ ನೀಡಿರುವ ಬ್ರಿಟಿಷರನ್ನು ಒಳಗೊಂಡ ಈ ಆಯೋಗವನ್ನು ಭಾರತದಾದ್ಯಂತ ಬಹಿಷ್ಕರಿಸಲಾಗಿತ್ತು. ಮೈಸೂರಿನಲ್ಲಿಯೂ ತಗಡೂರು ರಾಮಚಂದ್ರರಾವ್ ಅವರು ಸೈಮನ್ ಕಮಿಷನ್‌ಗೆ ಧಿಕ್ಕಾರ, ಡೌನ್ ಡೌನ್ ಸೈಮನ್ ಕಮಿಷನ್ ಎಂದು ಒಂದು ಕಿರು ಪುಸ್ತಕವನ್ನು ರಚಿಸಿ ಅದನ್ನು ಹೊರ ತಂದರು. ಹಾಗೂ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಆದರಿಂದ ಹದಿನೈದು ದಿನಗಳ ಕಾಲ ಸೆರೆಮನೆಗೆ ಹಾಕಲಾಗಿತ್ತು.

ಅಖಿಲ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಕೇಂದ್ರ ಸಮಿತಿಯ ಕರೆಯಂತೆಯೇ ಮೈಸೂರು ರಾಜ್ಯದಲ್ಲಿ ಎಂ.ಎನ್.ಜೋಯಿಸ್ ಮತ್ತು ಎಲ್.ವಿ.ರಾಜಗೋಪಾಲ್ ಅವರು ೧೯೩೦ ನೇ ಜನವರಿ ೨೬ ರಂದು

ಮೈಸೂರು ನಗರದಲ್ಲಿಯೂ ತ್ರಿವರ್ಣ ಧ್ವಜವನ್ನು ಹಾರಿಸಿದರು. ಬ್ರಿಟಿಷ್ ಪ್ರಾಂತ್ಯಗಳಲ್ಲಿ ಅಸಹಕಾರ ಚಳುವಳಿಯನ್ನು ಆರಂಭಿಸಿದಾಗ ಎರಡು ಪಂಗಡಗಳಾಗಿ ಸ್ವಯಂ ಸೇವಕರುಗಳನ್ನು ವಿಭಜಿಸಲಾಗಿತ್ತು. ಅದರಂತೆಯೇ ಸಿದ್ಧನಾಥ ಪಂತ್ ಒಂದು ತಂಡದ ನೇತೃತ್ವವನ್ನು ಹಾಗೂ ಜಿ.ಆರ್.ಸ್ವಾಮಿ ಅವರು ಮತ್ತೊಂದು ತಂಡದ ನಾಯಕತ್ವವನ್ನು ವಹಿಸಿದ್ದರು. ೧೯೩೧ ರ ಸಂದರ್ಭದಲ್ಲಿ ಗಾಂಧೀಜಿ ಮತ್ತು ಇರ್ವಿನ್ ನಡುವಿನ ಒಪ್ಪಂದಕ್ಕೆ ಸಹಿ ಹಾಕಿದಾಗ ಮುಂಬೈ ಕರ್ನಾಟಕದ ಪ್ರದೇಶಕ್ಕೆ ತಂಡಗಳು ಭೇಟಿ ನೀಡಿದ ನಂತರ ಹಿಂತಿರುಗಿದರು.

ಮೈಸೂರು ನಗರದಲ್ಲಿ ಬಿ. ಶ್ರೀನಿವಾಸ್‌ಮೂರ್ತಿ ಮತ್ತು ಕೃಷ್ಣಮೂರ್ತಿ ಪದಕಿ ಅವರುಗಳು ಎ.ಎನ್.ಸೂರ್ಯನಾರಾಯಣರಾವ್ ಅವರ ಸಂಪೂರ್ಣ ನೆರವಿನೊಂದಿಗೆ ಚಾಮುಂಡಿಪುರಂನಲ್ಲಿ ಡೈಮಂಡ್ಸ್ ಲೀಗ್ ಎಂಬ ಒಂದು ರಾಷ್ಟ್ರೀಯತಾವಾದಿ ಯುವ ಸಂಘಟನೆಯನ್ನು ರಚಿಸಿದ್ದರು.ಈ ಸಂಘಟನೆಯು ರಾಷ್ಟ್ರೀಯ ಚಳುವಳಿಗೆ ಹೆಚ್ಚು ಹೆಚ್ಚು ಯುವಕರನ್ನು ಸಜ್ಜುಗೊಳಿಸುವಂತಹ ಒಂದು ಪ್ರಧಾನ ಸಂಘಟನೆಯಾಗಿ ಹೊರ ಹೊಮ್ಮಿತು. ಅಂದು ಈ ಸಂಘಟನೆಯು ಯುವಕರನ್ನು ಹೆಚ್ಚು ಆಕರ್ಷಿಸುತಿತ್ತು. ಆದ್ದರಿಂದ ಈ ಪ್ರದೇಶದಲ್ಲಿ ಸ್ವಾತಂತ್ರ್ಯ ಚಳುವಳಿಯು ತೀವ್ರ ಗೊಳ್ಳಲು ಸಾಧ್ಯವಾಯಿತು. ಈ ಸಂಘಟನೆಯ ಮುಖೇನ ಮೈಸೂರಿನ ಚಾಮುಂಡಿಪುರಂನಲ್ಲಿ ಸ್ವದೇಶಿ ವಸ್ತುಗಳ ಪ್ರದರ್ಶನಕ್ಕೂ ಕೂಡ ಇದೇ ಸಂಘಟನೆಯೂ ಒಂದು ಕಾರ್ಯ ಯೋಜನೆಯನ್ನು ಕೂಡ ರೂಪಿಸಿತು. ಅದುವೇ ವಿದೇಶಿ ವಸ್ತುಗಳ ಬಹಿಷ್ಕಾರ ಹಾಗೂ ಸ್ವದೇಶಿ ವಸ್ತುಗಳ ಸ್ವೀಕಾರ ಚಳುವಳಿ.

ಮೈಸೂರು ನಗರದ ಚಾಮುಂಡಿಪುರಂನಲ್ಲಿ ರಚಿತಗೊಂಡಿರುವ ಡೈಮಂಡ್ಸ್ ಲೀಗ್ ಮೈಸೂರು ರಾಜ್ಯದಲ್ಲಿ ವಿದ್ಯಾರ್ಥಿ ಚಳವಳಿಗೆ ಆಸ್ತಿಭಾರವನ್ನು ಹಾಕಿತು. ಇದರ ಮುಖಾಂತರ ೧೯೩೨ ರಲ್ಲಿ ಮುಂಬಾಯಿಗೆ ಹೆಚ್ಚಿನ ಯುವಕರು ಹಾಗೂ ವಿದ್ಯಾರ್ಥಿಗಳು ಹೋಗಿದ್ದರು. ಆದರೆ ಅನೇಕರು ಕಾರಾಗೃಹದ ವಾಸಿಗಳಾದರು. ಅಂತಹ ಪ್ರಮುಖರಲ್ಲಿ ಎಂ.ಎನ್. ಜೋಯಿಸ್ ಮತ್ತು ಅವರ ಧರ್ಮಪತ್ನಿ ಸುಬ್ಬಮ್ಮ ಜೋಯಿಸ್, ಸೂರ್ಯನಾರಾಯಣ ಪಂಡಿತ್, ಎಂ.ಡಿ.ಶ್ರೀರಂಗರಾವ್ ಮತ್ತು ಟಿ.ಎಸ್.ಸುಬ್ಬಣ್ಣ ಅವರು ಸೇರಿ ಕೊಂಡಿದ್ದರು. ಇಲ್ಲಿಂದ ಮೈಸೂರಿಗೆ ಹಿಂತಿರುಗಿ ತಮ್ಮ ತಮ್ಮ ಮನೆಗಳಿಗೆ ಹಾಗೂ



ಕುಟುಂಬಗಳಿಗೆ ಹೋದಾಗ ಅವರನ್ನು ಅನೇಕರು ಸಾಮಾಜಿಕ ಬಹಿಷ್ಕಾರವನ್ನು ಎದುರಿಸಿದರು. ಹಾಗೆಯೇ ಎಂ.ಎನ್ ಜೋಯಿಸ್ ಮತ್ತು ಅವರ ಧರ್ಮಪತ್ನಿ ಸುಬ್ಬಮ್ಮ ಅವರಿಗೆ ಮನೆಯ ಪ್ರವೇಶವನ್ನು ಕುಟುಂಬ ವರ್ಗದವರು ಸಂಪೂರ್ಣವಾಗಿಯೇ ನಿರಾಕರಿಸಿದ್ದರು. ಇದೆಲ್ಲದರ ನಡುವೆಯೂ ವಿದ್ಯಾರ್ಥಿಗಳು ಹಾಗೂ ಯುವಕರು ಮೈಸೂರು ರಾಜ್ಯದಲ್ಲಿ ಸ್ವಾತಂತ್ರ್ಯ ಚಳುವಳಿಯನ್ನು ಬಲಿಷ್ಠ ಗೊಳಿಸಲು ದುಡಿದರು.

ನಂಜನಗೂಡಿನಲ್ಲಿ ಅಸ್ಪೃಶ್ಯರಿಗೆ ದೇವಾಲಯಗಳ ಪ್ರವೇಶವನ್ನು ನಿಷೇಧಿಸಲಾಗಿತ್ತು. ಇದೇ ಸಂದರ್ಭದಲ್ಲಿ ಮಹಾತ್ಮಾ ಗಾಂಧೀಜಿ ಅವರ ಅನೇಕ ರಚನಾತ್ಮಕ ಕಾರ್ಯ ಕ್ರಮಗಳಲ್ಲಿ ಬಹು ಪ್ರಧಾನವಾಗಿ ಅಸ್ಪೃಶ್ಯತೆಯ ನಿರ್ಮೂಲನಾ ಕಾರ್ಯಕ್ರಮವು ಕೂಡ ಒಂದಾಗಿಯೇ ಸೇರ್ಪಡೆ ಗೊಂಡಿತ್ತು. ಗಾಂಧೀಜಿ ಅವರಿಂದ ಪ್ರಭಾವಿತರಾಗಿದ್ದಂತಹ ತಗಡೂರು ರಾಮಚಂದ್ರರಾವ್ ಅವರು ನಂಜನಗೂಡಿನಲ್ಲಿ ಅಸ್ಪೃಶ್ಯರಿಗೆ ದೇವಾಲಯ ಪ್ರವೇಶದ ಚಳುವಳಿಯ ಕಾರ್ಯಕ್ರಮವನ್ನು ಆಯೋಜಿಸಿದ್ದರು. ೧೯೩೪ರ ದಶಕದಲ್ಲಿ ತಗಡೂರಿನಲ್ಲಿ ರಾಮಚಂದ್ರರಾವ್ ಅವರೇ ಸ್ವತಃ ಅಸ್ಪೃಶ್ಯರಿಗೆ ವಸತಿ ನಿಲಯ ಸ್ಥಾಪಿಸಿದ್ದರು. ಅದರ ನಿಮಿತ್ತಾಗಿ ಸ್ವತಃ ಗಾಂಧೀಜಿ ಅವರೇ ಮೈಸೂರು ರಾಜ್ಯಕ್ಕೆ ಆಗಮಿಸಿ ತಗಡೂರು ರಾಮಚಂದ್ರರಾವ್ ಹಾಗೂ ಎಂ.ಎನ್.ಜೋಯಿಸ್ ಅವರಂತಹ ಯುವಕರ ಜೊತೆಗೂಡಿ ಹರಿಜನೋದ್ಧಾರ ದೇಣಿಗೆಯನ್ನು ಸಂಗ್ರಹಿಸಿದರು.

ತಗಡೂರು ರಾಮಚಂದ್ರರಾವ್ ಮತ್ತು ಎಂ.ಎನ್. ಜೋಯಿಸ್ ಅವರಂತಹ ಸಹೋದ್ಯೋಗಿಗಳು ಹಳ್ಳಿಗಳ ನಡುವೆ ಕೆಲಸ ಮಾಡಲು ಹೋದಾಗ ಇವರುಗಳು ಸಾಕಷ್ಟು ಅವಮಾನ ಹಾಗೂ ಅಪಮಾನಗಳನ್ನು ಎದುರಿಸಿದರು. ವಿದ್ಯಾರ್ಥಿ ನಿಲಯಗಳಿಂದಲೂ ಕೂಡ ಅವರಿಗೆ ಆಹಾರ ಮತ್ತು ವಸತಿಯನ್ನು ನೀಡಲು ನಿರಾಕರಿಸಲಾಗಿತ್ತು. ಇವರುಗಳ ಮೇಲೆ ಕಲ್ಲುಗಳು, ಪಾದರಕ್ಷೆಗಳು ಹಾಗೂ ಗೋಮೂತ್ರಗಳನ್ನು ಕೂಡ ಎಸೆಯುವ ಮೂಲಕ ಸ್ವಾಗತಿಸಿದರು.

೧೯೩೮ ನೇ ಏಪ್ರಿಲ್ ೦೯ ರಂದು ಮೈಸೂರು ಪ್ರಾಂತ್ಯ ಕಾಂಗ್ರೆಸ್ ಸಮಿತಿಯು ಆಯೋಜಿಸಿದ್ದಂತಹ ಶಿವಪುರ ಸತ್ಯಾಗ್ರಹ ಮತ್ತು ಧ್ವಜ ಸತ್ಯಾಗ್ರಹದ ಅನಂತರ ಅನೇಕ ಹೋರಾಟಗಾರ ನಾಯಕರು ಕಾರಾಗೃಹದ ಪಾಲಾದರು. ಹಾಗೆಯೇ ಈ ಸ್ವಾತಂತ್ರ್ಯ ಹೋರಾಟದಲ್ಲಿ ಚಾಮರಾಜನಗರ ಮತ್ತು ಕೆ.ಆರ್.

ನಗರದ ಸ್ವಾತಂತ್ರ್ಯ ಹೋರಾಟಗಾರರು ಕೂಡ ಇದರಲ್ಲಿ ಭಾಗವಹಿಸಿದ್ದರು. ಇದರ ಪರಿಣಾಮ ಮೈಸೂರು ಸಂಸ್ಥಾನದಾದ್ಯಂತ ೬೦೦೦ ಜನ ಹೋರಾಟಗಾರರನ್ನು ಕಾರಾಗೃಹಕ್ಕೆ ಕಳುಹಿಸಲಾಗಿತ್ತು.

ನಂತರ ಮೈಸೂರು ರಾಜ್ಯದ ವಿದ್ಯಾರ್ಥಿ ನಾಯಕರಾಗಿದ್ದಂತಹ ರಾಮಚಂದ್ರ ಜೋಯಿಸ್, ಎಚ್.ಎಸ್.ಸದಾಶಿವಯ್ಯ ಮತ್ತು ಟಿ.ಎಸ್. ಸುಬ್ಬಣ್ಣ ಅವರು ೧೯೩೭, ೧೯೩೮ ಮತ್ತು ೧೯೩೯ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಅಂಗಸಂಸ್ಥೆ ಆಗಿರುವಂತಹ ಮಹಾರಾಜ ಕಾಲೇಜಿನಲ್ಲಿ ಧ್ವಜಾರೋಹಣ ಸೇರಿದಂತೆ ರಾಷ್ಟ್ರೀಯತೆಯ ಕಾರ್ಯಕ್ರಮಗಳನ್ನು ನಡೆಸಿದರು. ೧೯೩೮ ರಲ್ಲಿ ಸಂತ್ರಸ್ತ ವಿದ್ಯಾರ್ಥಿಗಳಿಗಾಗಿ ಮಹಾಜನ ಪ್ರೌಢಶಾಲೆಯನ್ನು ಆರಂಭಿಸುವ ಬಗ್ಗೆ ಎಂ.ಎನ್.ಜೋಯಿಸ್, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ನಾಯಕರುಗಳು ಕ್ರಮವನ್ನು ತೆಗೆದು ಕೊಂಡಿದ್ದರು. ಹೀಗೆ ಕ್ರಮವನ್ನು ತೆಗೆದು ಕೊಂಡಿದ್ದರೂ ಕೂಡ ವಿದ್ಯಾರ್ಥಿಗಳ ಮುಷ್ಕರವೂ ಮಾತ್ರ ನಿಲ್ಲದೇ ಮುಂದುವರೆಯುತ್ತಿತ್ತು. ವಿದ್ಯಾರ್ಥಿಗಳ ಮುಷ್ಕರವು ಗುಂಪು ಗುಂಪುಗಳಾಗಿ ಗ್ರಾಮೀಣ ಪ್ರದೇಶಗಳಿಗೂ ಕೂಡ ಹರಡಿ ಕೊಂಡಿತು. ಈ ಮುಷ್ಕರದಿಂದಾಗಿ ವಿದ್ಯಾರ್ಥಿ ಮುಖಂಡರಾದಂತಹ ಎಚ್.ವೈ.ಶಾರದಾ ಪ್ರಸಾದ್ ಮತ್ತು ಅಬ್ದುಲ್ ಕಫೂರ್ ಅವರು ಸೇರಿ ಕೊಂಡಂತೆ ಎಂಟು ಜನ ವಿದ್ಯಾರ್ಥಿ ಮುಖಂಡರುಗಳನ್ನು ಬಂಧಿಸಲಾಯಿತು. ಹಾಗೆಯೇ ಈಗಾಗಲೇ ಬಂಧಿತರಾಗಿದ್ದ ೨೬ ಜನ ಹಿರಿಯ ಹೋರಾಟಗಾರರನ್ನು ಮೈಸೂರು ಕಾರಾ ಗೃಹದಿಂದ ಪ್ರತ್ಯೇಕವಾಗಿ ಇಡಲು ಬೆಂಗಳೂರು ಕೇಂದ್ರ ಕಾರಾಗೃಹಕ್ಕೆ ಸ್ಥಳಾಂತರಿಸಲಾಗಿತ್ತು. ವಿದ್ಯಾರ್ಥಿಗಳ ಈ ಚಳುವಳಿಯನ್ನು ತಡೆಯುವ ಸಲುವಾಗಿಯೇ ಸರ್ಕಾರವು ವಿವಿಧ ರೀತಿಯ ಪ್ರಯತ್ನಗಳನ್ನು ಮುಂದುವರಿಸಿತು.

ಭಾರತದ ರಾಷ್ಟ್ರೀಯ ಚಳವಳಿಯ ನಾಯಕರಾದಂತಹ ಮಹಾತ್ಮಾಗಾಂಧೀಜಿ ಅವರ ನೇತೃತ್ವದಲ್ಲಿ ಭಾರತ ಬಿಟ್ಟು ತೊಲಗಿ ಚಳವಳಿ ನಡೆಯಿತು. ೧೯೪೨ನೇ ಆಗಸ್ಟ್ ೮ ರಂದು ಮುಂಬಾಯಿಯ ಗೋವಾಲಿಯ ಮೈದಾನದಲ್ಲಿ (ಅದು ಇಂದು ಆಗಸ್ಟ್ ಕ್ರಾಂತಿ ಮೈದಾನ ಎಂದು ಹೆಸರು ಪಡೆದಿದೆ) ಮಹಾತ್ಮಾಗಾಂಧೀಜಿ ಅವರು ಮಾಡು ಇಲ್ಲವೆ ಮಡಿ ಎಂಬ ಮಹತ್ವ ಪೂರ್ಣ ಘೋಷಣೆಯನ್ನು ಘೋಷಿಸಿದರು. ೧೯೪೨ ನೇ ಆಗಸ್ಟ್ ೯ ರಂದು ಬ್ರಿಟಿಷರು ಗಾಂಧೀಜಿ ಅವರನ್ನು ದಸ್ತಗಿರಿ ಮಾಡಿ ಆಗಖಾನ್ ಅರಮನೆಯ ಗೃಹಬಂಧನದಲ್ಲಿ ಇಡಲಾಯಿತು. ಗಾಂಧೀಜಿ ಅವರ ಬಂಧನದಿಂದಾಗಿ ಚಳವಳಿಯ ಸ್ವರೂಪವೇ ಬದಲಾಯಿತು. ಚಳವಳಿಯ ನಾಯಕತ್ವವನ್ನು ವಹಿಸಿದ್ದಂತಹ ಗಾಂಧೀಜಿ ಅವರ ಬಂಧನ ಅನಂತರ ಜಯಪ್ರಕಾಶ್ ನಾರಾಯಣ್, ಡಾ.ರಾಮಮನೋಹರ ಲೋಹಿಯಾ ಮತ್ತು ಅರುಣ್ ಅಸಫ್‌ಅಲಿ ಅವರಂತಹ ಪ್ರಮುಖರು ಭಾರತೀಯ ರಾಷ್ಟ್ರೀಯ ಚಳವಳಿಯಲ್ಲಿ ಪ್ರಮುಖವಾದ ಪಾತ್ರವನ್ನು ನಿರ್ವಹಿಸಿದರು. ಈ ಚಳವಳಿಯ ತೀಕ್ಷ್ಣತೆಯೂ ಬಹು ಸ್ಪಷ್ಟವಾಗಿಯೇ ಅರಿತ ಬ್ರಿಟಿಷ್ ಆಡಳಿತವು ಬಹುತೇಕ ಭಾರತೀಯ ನಾಯಕರನ್ನು ಸೆರೆಮನೆಗೆ ಹಾಕಿದರು. ನಾಯಕರಿಲ್ಲದೆಯೇ ಚಳವಳಿಯು ಉಗ್ರ ಸ್ವರೂಪವನ್ನು ಕಂಡದ್ದು ಮಾತ್ರ ಈ ಚಳವಳಿಯ ಹೆಗ್ಗಳಿಕೆಯೇ ಆಗಿತ್ತು. ದೇಶದ ಮೂಲೆ ಮೂಲೆಯಲ್ಲಿಯೂ ಈ ಘೋಷಣೆಯು ಭಾರತೀಯರನ್ನು ಬಡಿದೆಬ್ಬಿರಿಸಿತು. ಕೃಷಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಭಾರತ ದೇಶದಾದ್ಯಂತ ಕ್ರಾಂತಿಯ ಜ್ವಾಲೆಯ ಅಲೆಯು ಎದ್ದಿತು. ಬ್ರಿಟಿಷರ ದಬ್ಬಾಳಿಕೆಯು ಭಾರತ ದೇಶದಲ್ಲಿನ ಜನರ ಕಣ ಕಣದಲ್ಲಿಯೂ ರಕ್ತ ಕುದಿಯುವಂತೆ ಮನೆ ಮಾಡಿತು.

ಮೈಸೂರು ವಿದ್ಯಾರ್ಥಿಗಳ ಚಳವಳಿಯು ನಡೆಯುತ್ತಿರುವಾಗಲೇ ೧೯೪೨ ನೇ ಅಕ್ಟೋಬರ್ ೨೯ ರಂದು ಮೈಸೂರು ಕಾರಾಗೃಹದಲ್ಲಿ ನಡೆದಿರುವ ಲಾಠಿ ಚಾರ್ಜ್‌ನಿಂದಾಗಿ ಶಂಕರಪ್ಪ ಎಂಬ ವಿದ್ಯಾರ್ಥಿಯು ಸಾವನ್ನಪ್ಪಿದ್ದನು. ಇದರಿಂದಾಗಿ ಕಾರಾಗೃಹ ವಾಸಿಗಳು ಮತ್ತು ಅವರ ಪೋಷಕರಲ್ಲಿ ಹೆಚ್ಚಿನ ಆತಂಕ ಹಾಗೂ ತಲ್ಲಣವೂ ಕೂಡ ಉಂಟಾಯಿತು.

೧೯೪೨ನೇ ನವೆಂಬರ್ ೨೩ ರಂದು ಮೈಸೂರು ನಗರದಲ್ಲಿರುವ ಟೌನ್‌ಹಾಲ್‌ನಲ್ಲಿ ಭೂಪಾಲನ್ ವಾಸುದೇವಮೂರ್ತಿ ಅವರ ಅಧ್ಯಕ್ಷತೆಯಲ್ಲಿ ವಿದ್ಯಾರ್ಥಿಗಳ ಬೃಹತ್ ಸಭೆಯೊಂದನ್ನು ಆಯೋಜಿಸಲಾಗಿತ್ತು. ಈ ವಿದ್ಯಾರ್ಥಿಗಳ ಸಭೆಯಲ್ಲಿ ಮೈಸೂರು ರಾಜ್ಯಾದ್ಯಂತ ವಿವಿಧ ಭಾಗಗಳಿಂದ ಮತ್ತು ಗ್ರಾಮಗಳಿಂದ ಸಾವಿರಕ್ಕೂ ಹೆಚ್ಚಿನ ವಿದ್ಯಾರ್ಥಿ ಸ್ವಯಂಸೇವಕರು ಬಂದು ಸಕ್ರಿಯವಾಗಿ ಭಾಗವಹಿಸಿದ್ದರು. ಈ ಸಭೆಯಲ್ಲಿ ಈಗಾಗಲೇ ಮಾಡುತ್ತಿದ್ದಂತಹ ವಿದ್ಯಾರ್ಥಿಗಳ ಮುಷ್ಕರವನ್ನು ಹಿಂಪಡೆದು ತರಗತಿಗಳಿಗೆ ಮರಳಲು ಹಾಗೂ ರಾಷ್ಟ್ರ ನಿರ್ಮಾಣದ ಕಾರ್ಯದಲ್ಲಿ ತಮ್ಮನ್ನು ತಾವುಗಳು ಸಂಪೂರ್ಣವಾಗಿ ತೊಡಗಿಸಿ ಕೊಳ್ಳಲು ಒಂದು ಮಹತ್ವದ ನಿರ್ಣಯವನ್ನು ಅಂಗೀಕರಿಸಲಾಯಿತು. ಇದಾದ ನಂತರ

ಎಚ್.ವೈ.ಶಾರದಾಪ್ರಸಾದ್ ಮತ್ತು ಇತರ ರಾಜಕೀಯ ಅಪರಾಧಿ ನಾಯಕರನ್ನು ೧೯೪೨ ನೇ ಡಿಸೆಂಬರ್ ೩ ರಂದು ಬಿಡುಗಡೆ ಮಾಡಲಾಯಿತು.

೧೯೪೨ನೇ ಡಿಸೆಂಬರ್ ೯ ರಂದು ಈ ಭಾಗದ ಸ್ವಾತಂತ್ರ್ಯ ಚಳವಳಿಯ ನಾಯಕರಾಗಿದ್ದ ಎಂ.ವಿ.ಕೃಷ್ಣಪ್ಪ ಅವರ ನೇತೃತ್ವದಲ್ಲಿ ಮತ್ತೆ ಸ್ವಾತಂತ್ರ್ಯ ಸಂಗ್ರಾಮವು ದೊಡ್ಡದಾಗಿ ಸತ್ಯಾಗ್ರಹವು ಆರಂಭ ಗೊಂಡಿತು. ೧೯೪೩ ನೇ ಜನವರಿಯಲ್ಲಿ ಮತ್ತೆ ಇವರನ್ನು ನ್ಯಾಯಾಂಗದ ಬಂಧನಕ್ಕೆ ಒಳಪಡಿಸಲಾಯಿತು. ಮೈಸೂರು ನಗರದಲ್ಲಿ ನಡೆದಿರುವ ೧೧ ವಾರಗಳ ವಿದ್ಯಾರ್ಥಿಗಳ ಹೋರಾಟವು ಕರ್ನಾಟಕದ ಸ್ವಾತಂತ್ರ್ಯ ಚಳವಳಿಯಲ್ಲಿ ಚರಿತ್ರೆಯನ್ನು ಸೃಷ್ಟಿಸಿತು.

ಮೈಸೂರು ಸಂಸ್ಥಾನದಲ್ಲಿಯೂ ಕೂಡ ಕ್ವಿಟ್ ಇಂಡಿಯಾ ಚಳವಳಿಯ ಸಮಯದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿದ್ದ ಜನರು ಅಂಚೆ ಕಚೇರಿಗಳಿಗೆ ಮುತ್ತಿಗೆ ಹಾಕಿದ್ದರು. ರೈಲು ಹಳಿಗಳನ್ನು ಹಾನಿ ಗೊಳಿಸಿದರು ಮತ್ತು ದೂರವಾಣಿ ಸಂಪರ್ಕ ಮಾರ್ಗಗಳನ್ನು ಕತ್ತರಿಸಿ ಪ್ರತಿಭಟಿಸಿದರು. ಇದು ಮಹಾತ್ಮಾ ಗಾಂಧೀಜಿ ಅವರ ಬಂಧನದ ಸುದ್ದಿ ಪ್ರಕಟವಾದ ಅನಂತರ ಪ್ರತಿಭಟನೆ ಹೆಚ್ಚು ತೀವ್ರ ಗೊಂಡಿತು.

ಮೈಸೂರು ಮಹಾನಗರದಲ್ಲಿ ಇರುವ ಸುಬ್ಬರಾಯ್ಯನ ಕೆರೆ ಮೈದಾನವು ಮೈಸೂರು ಪ್ರಾಂತ್ಯದ ಸ್ವಾತಂತ್ರ್ಯ ಚಳವಳಿಯ ಕೇಂದ್ರವಾಗಿತ್ತು. ಇದು ಮೈಸೂರು ನಗರದ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಅನಾಥಾಲಯದ ಎದುರುಗಡೆ ಇದೆ. ಈ ಮೈದಾನವು ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಕಾರ್ಯ ಯೋಜನೆಗಳು, ಸಭೆಗಳು ಇಲ್ಲಿಂದಲೇ ರೂಪು ಗೊಳ್ಳುತ್ತಿದ್ದವು. ಚಳವಳಿಯ ರೂವಾರಿಗಳು ಮತ್ತು ನಾಯಕರುಗಳು ಸಾರ್ವಜನಿಕ ಸಭೆಗಳನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಪರಿಪೂರ್ಣ ಹಾಗೂ ಮಹತ್ವದ ವೇದಿಕೆಯಾಗಿತ್ತು. ಇಲ್ಲಿಗೆ ಆಗಮಿಸಿದ ಹಲವಾರು ವಿದ್ಯಾರ್ಥಿಗಳು ಪ್ರಭಾವಿತ ಗೊಂಡು ಚಳವಳಿಯನ್ನು ಕೂಡಿ ಕೊಂಡರು. ಸಭೆಗಳೂ ನಡೆಯುವಾಗ ಪೊಲೀಸರು ಚಳವಳಿಗಾರರನ್ನು ಬಂಧಿಸಲು ಸದಾ ಸಜ್ಜಾಗಿರುತ್ತಿದ್ದರು. ಎಷ್ಟೋ ಬಾರಿ ಚಳವಳಿಯ ನಾಯಕರು ಮಹಿಳಾ ವೇಷಧಾರಿಗಳಾಗಿ ಬಂದು ಭಾಷಣ ಮಾಡಿ ಅಲ್ಲಿಂದ ಹೋಗುತ್ತಿದ್ದರಂತೆ ಅದನ್ನು ಅನೇಕ ಅಂದಿನ



ವಿದ್ಯಾರ್ಥಿಗಳಾಗಿದ್ದವರು ಇಂದಿನ ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಮೆಲಕು ಹಾಕುತ್ತಾರೆ.

ಭಾರತದ ಸ್ವಾತಂತ್ರ್ಯ ಹೋರಾಟದ ಚಳವಳಿಯಲ್ಲಿ ಶಾಲಾ ಕಾಲೇಜುಗಳ ಸಾವಿರಾರು ವಿದ್ಯಾರ್ಥಿಗಳ ಭಾಗವಹಿಸುವಿಕೆಯು ಒಂದು ಮಾದರಿಯ ವೈವಿಧ್ಯತೆಯಿಂದಲೇ ಕೂಡಿತ್ತು. ಏಕೆಂದರೆ ಇಡೀ ಜಗತ್ತಿನಲ್ಲಿ ಎರಡು ವರ್ಗಗಳು ಹೆಚ್ಚಿನ ಸಂಖ್ಯೆಯಲ್ಲಿರುವುದನ್ನು ಗುರುತಿಸಬಹುದು. ಒಂದು ಕಾರ್ಮಿಕ ವರ್ಗ ಮತ್ತೊಂದು ವಿದ್ಯಾರ್ಥಿ ವರ್ಗವೇ ಆಗಿರುತ್ತದೆ. ವಿದ್ಯಾರ್ಥಿ ಚಳವಳಿಯು ಮೈಸೂರು ರಾಜ್ಯದಲ್ಲಿ ಮಾತ್ರವಲ್ಲದೇ ಇಡೀ ದೇಶದಾದ್ಯಂತ ನಡೆಯಿತು. ಭಾರತದ ಸ್ವಾತಂತ್ರ್ಯ ಚಳವಳಿಯಲ್ಲಿ ಸಾಗರೋಪಾದಿಯಲ್ಲಿ ವಿದ್ಯಾರ್ಥಿ ಸಮೂಹವು ತಮ್ಮ ತಮ್ಮ ತನು ಮನ ಹಾಗೂ ಧನಗಳನ್ನು ಕೂಡ ಸಮರ್ಪಿಸಿದ್ದಾರೆ. ಇದರಿಂದ ಅನೇಕ ಸತ್ಯಾಗ್ರಹಗಳಲ್ಲಿ ಭಾಗವಹಿಸಿದ ಹಲವಾರು ನಾಯಕರು ಬಂಧಿಗಳಾಗಿ ಕಾರಾ ಗೃಹಗಳಲ್ಲಿದ್ದರು. ಅಂತಹ ಸತ್ಯಾಗ್ರಹಿಗಳನ್ನು ಕಾರಾಗೃಹಗಳಿಂದ ಬಿಡುಗಡೆ ಮಾಡುವಂತೆ ಮತ್ತು ಭಾರತಕ್ಕೆ ಸ್ವಾತಂತ್ರ್ಯ ಬಂದಿರುವ ಸವಿನೆನಪಿನ ಅಂಗವಾಗಿ ಪರೀಕ್ಷೆಗಳಲ್ಲಿ ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳು ಕೂಡ ತೇರ್ಗಡೆ ಹೊಂದಿದ್ದಾರೆ ಎಂದು ಘೋಷಿಸುವಂತೆ ತಮ್ಮ ತಮ್ಮ ಪ್ರಾಂಶುಪಾಲರುಗಳನ್ನು ಸಂಯುಕ್ತ ಪ್ರಾಂತ್ಯದ ವಿದ್ಯಾರ್ಥಿ ಕಾಂಗ್ರೆಸ್ ಸಮಿತಿಯು ಒತ್ತಾಯಿಸಿತು.

ಭಾರತವು ಬ್ರಿಟಿಷರಿಂದ ಸ್ವಾತಂತ್ರ್ಯಗೊಂಡಿರುವ ಸಂದರ್ಭದಲ್ಲಿ ಮೈಸೂರು ಮಹಾನಗರದ ಸ್ವಾತಂತ್ರ್ಯ ಹೋರಾಟದ ಹೃದಯ ಭಾಗವೇ ಆಗಿರುವಂತಹ ಸುಬ್ಬರಾಯ್ಯನ ಕೆರೆಯ ಮೈದಾನದಲ್ಲಿ ರಾಷ್ಟ್ರೀಯ ತ್ರಿವರ್ಣಧ್ವಜವನ್ನು ಎಸ್. ಚೆನ್ನಯ್ಯ ಅವರು ಹಾರಿಸಿದರು. ಹಾಗೆಯೇ ದೇಶಿಯ ವಿದ್ಯಾಶಾಲೆಯಲ್ಲಿ ಎಂ.ಎನ್. ಜೋಯಿಸ್ ಅವರು ಧ್ವಜಾರೋಹಣ ಸಮಾರಂಭವನ್ನು ಕೂಡ ನೆರವೇರಿಸಿದ್ದರು. ಇದರಲ್ಲಿ ವಿದ್ಯಾರ್ಥಿ ಕಾಂಗ್ರೆಸ್ ಸಮಿತಿಯ ಸದಸ್ಯರು ಮತ್ತು ವಿಠಲರಾವ್ ಶೇಷಾಗ್ನೀ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳು, ಮೈಸೂರು ನಗರದ ಇಟ್ಟಿಗೆಗೂಡು ಬಡಾವಣೆಯ ಯುವಕರ ಸಂಘ ಹಾಗೂ ಇತರೆ ಸಂಘಟನೆಗಳು ಇಲ್ಲಿ ಭಾಗವಹಿಸಿದ್ದವು. ಈ ಪ್ರಕಾರವಾಗಿ ಸಾಹುಕಾರ ಚೆನ್ನಯ್ಯ ಅವರ ವಿದ್ಯಾರ್ಥಿ ನಿಲಯದಲ್ಲಿ ಸಂಗೀತ ರತ್ನ ಟಿ.ಚೌಡಯ್ಯ ಅವರ ಪಿಟೀಲು

ವಾದನವು ಹಾಗೂ ಎಚ್.ಡಿ.ನಾಗರ್ಜುನ ಅವರ ಮೃದಂಗ ವಾದನದೊಡನೆ ಸ್ವಾತಂತ್ರ್ಯ ಬಂದಿರುವ ಸಂಭ್ರಮಾಚರಣೆಯನ್ನು ಏರ್ಪಡಿಸಿದ್ದರು. ಮತ್ತೇ ಪುರಸಭೆಯ ವತಿಯಿಂದಲೇ ಮೈಸೂರು ನಗರದಲ್ಲಿನ ಪ್ರಾಥಮಿಕ ಶಾಲಾ ಮಕ್ಕಳಿಗೆ ಸಿಹಿ ತಿಂಡಿ ತಿನಸುಗಳನ್ನು ಹಂಚಿಕೆ ಮಾಡಿರುವುದು. ನೂರು ಅಡಿ ಜೋಡಿ ರಸ್ತೆಯಲ್ಲಿರುವ ಶ್ರೀಹೊಸಳ ರಂಗಯ್ಯ ಅವರ ವಿದ್ಯಾರ್ಥಿನಿಲಯದಲ್ಲಿಯೂ ಕೂಡ ಧ್ವಜಾರೋಹಣವನ್ನು ಮಾಡಿರುವುದು ವಿಶೇಷತೆಯಿಂದಲೇ ಕೂಡಿತ್ತು.

## ಮೈಸೂರು ಚಲೋ ಚಳವಳಿ

೧೯೪೭ನೇ ಆಗಸ್ಟ್ ೧೫ ರಂದು ಇಡೀ ಅಖಂಡ ಭಾರತ ದೇಶವೇ ಸ್ವಾತಂತ್ರ್ಯಗೊಂಡರೂ ಮೈಸೂರು ರಾಜ್ಯದಲ್ಲಿ ಮಾತ್ರ ಸ್ವಾತಂತ್ರ್ಯದ ಸಂಭ್ರಮ ಮತ್ತು ಆಚರಣೆಯನ್ನು ಮಾಡಲು ಸಾಧ್ಯವಾಗಿರುವುದಿಲ್ಲ. ಇದಕ್ಕೆ ಪ್ರಧಾನವಾದಂತಹ ಕಾರಣವೆಂದರೆ ಅಂದಿನ ಮೈಸೂರು ಮಹಾಸಂಸ್ಥಾನದ ಮಹಾ ರಾಜರಾದಂತಹ ಶ್ರೀ ಜಯಚಾಮರಾಜ ಒಡೆಯರು ರಾಜಪ್ರಭುತ್ವದ ಸರ್ಕಾರವನ್ನು ರದ್ದುಗೊಳಿಸಿ, ಪ್ರಜಾಪ್ರಭುತ್ವದ ವ್ಯವಸ್ಥೆಯ ಸರ್ಕಾರದಲ್ಲಿ ಸೇರ್ಪಡೆ ಗೊಳ್ಳಲು ಒಪ್ಪದೇ ಇರುವ ಕಾರಣ ಅದರ ವಿರುದ್ಧವಾಗಿ ಮೈಸೂರು ಸಂಸ್ಥಾನದ ಅನೇಕ ನಾಯಕರು ಮತ್ತು ವಿದ್ಯಾರ್ಥಿ ಸಮೂಹವು ಪ್ರತಿಭಟಿಸಿ ಕಾರಾಗೃಹ ವಾಸಿಗಳು ಕೂಡ ಆಗಿದ್ದರು.

ಹೀಗೆ ಪೊಲೀಸರ ದಸ್ತಗಿರಿಗೆ ಒಳಗಾಗಿರುವ ಸತ್ಯಾಗ್ರಹಿಗಳು ಮತ್ತು ಅವರ ಮುಖಂಡರಿಗೆ ಅನುಭೂತಿ ತೋರಿ ಬಿಡುಗಡೆ ಗೊಳಿಸುವಂತೆ ಹಲವು ಮೈಸೂರು ಪ್ರಾಂತ್ಯ ಕಾಂಗ್ರೆಸ್ ಸಮಿತಿಯ ಕಾರ್ಯಕರ್ತರು ಮತ್ತು ವಿದ್ಯಾರ್ಥಿ ಕಾಂಗ್ರೆಸ್ ಸಮಿತಿಯ ಅನೇಕ ವಿದ್ಯಾರ್ಥಿಗಳು ಮತ್ತು ಮೈಸೂರು ಕೃಷ್ಣರಾಜೇಂದ್ರ ಗಿರಣಿ ಕೆಲಸಗಾರರು ಮುಷ್ಕರ ಹೂಡಿದರು. ಈ ಮುಷ್ಕರವು ಅಲ್ಲಿಂದ ಟೌನ್‌ಹಾಲ್‌ಗೆ ಮೆರವಣಿಗೆಯಲ್ಲಿ ತೆರಳಿ ಬಂದಿದ್ದರು. ಇದೇ ಸಂದರ್ಭದಲ್ಲಿ ಮೈಸೂರು ನಗರದಲ್ಲಿ ಹಲವು ಕಾಲೇಜುಗಳು ಮತ್ತು ಶಾಲೆಗಳ ಸಹಸ್ರಾರು ವಿದ್ಯಾರ್ಥಿಗಳು ಸಾಲು ಸಾಲಾಗಿ ಈ ಮುಷ್ಕರಕ್ಕೆ ಬೆಂಬಲವನ್ನು ಸೂಚಿಸಿದರು. ಆ ಮೂಲಕವಾಗಿಯೇ ಈ ಪ್ರಚಂಡ ಮೆರವಣಿಗೆಯನ್ನು ನಡೆಸಿದರು. ಹೀಗೆ ಒಂದೆಡೆ ಬೃಹತ್ ಗುಂಪಾಗಿ ಸೇರಿದ್ದಂತಹ ವಿದ್ಯಾರ್ಥಿ ಸಮೂಹವು ಮಹಾರಾಜ ಕಾಲೇಜಿನಿಂದ ಮೆರವಣಿಗೆ ಹೊರಟು ಅನೇಕ ಶಾಲಾ–ಕಾಲೇಜುಗಳಲ್ಲಿ ಪಿಕೆಟಿಂಗ್ ಮತ್ತು ಹರತಾಳಗಳನ್ನು ಮಾಡಿದರು.ಅನಂತರ ಮೈಸೂರು ಕೇಂದ್ರ ಕಾರಾಗೃಹದ ಮುಂದೆಯೂ ಗುಂಪು ಸೇರಿದಾಗ ಹಲವು ವಿದ್ಯಾರ್ಥಿಗಳು ಮತ್ತು ಸತ್ಯಾಗ್ರಹಿಗಳು ದಸ್ತಗಿರಿಗೆ ಒಳಗಾಗಿದ್ದ ನಾಯಕರಿಗೆ ಜಯಕಾರವನ್ನು ಮೊಳಗಿಸಿ ಅಲ್ಲಿಂದ ವಾಪಸ್ಸು ಬಂದಿದ್ದರು.



ಇದೇ ದಿನ ಮೈಸೂರು ಪ್ರಾಂತ್ಯದಲ್ಲಿ ಬರುವಂತಹ ಕೃಷ್ಣರಾಜಸಾಗರದಲ್ಲಿಯೂ ಕೂಡ ಅಲ್ಲಿನ ವಿದ್ಯಾರ್ಥಿ ಕಾಂಗ್ರೆಸ್ ಸಮಿತಿಯ ನೇತೃತ್ವದಲ್ಲಿ ಸತ್ಯಾಗ್ರಹ ಪ್ರಚಾರಕ್ಕಾಗಿ ಗಾಂಧಿ ಮೈದಾನದಲ್ಲಿ ಬಹಿರಂಗ ಸಭೆಯನ್ನು ಆಯೋಜಿಸಲಾಗಿತ್ತು. ಈ ಸಭೆಯಲ್ಲಿ ಪ್ರಾಂತ್ಯ ಕಾಂಗ್ರೆಸ್ ವಿದ್ಯಾರ್ಥಿ ಕ್ರಿಯಾ ಸಮಿತಿಯ ಸದಸ್ಯರಾದ ಎಂ.ವಿ.ಸೀತಾರಾಮಯ್ಯ ಅವರು ಅಧ್ಯಕ್ಷತೆಯನ್ನು ವಹಿಸಿದ್ದರು. ಈ ಮಹತ್ವದ ಸಭೆಯಲ್ಲಿ ಮೈಸೂರು ಪ್ರಾಂತ್ಯ ಕಾಂಗ್ರೆಸ್ ಸಮಿತಿಯ ಸಕ್ರಿಯ ಕಾರ್ಯಕರ್ತರಾಗಿದ್ದ ಚನ್ನಮಲ್ಲಯ್ಯಶೆಟ್ಟಿ ಹಾಗೂ ಹಲವು ವಿದ್ಯಾರ್ಥಿ ಮುಖಂಡರು ಭಾಗವಹಿಸಿ ಭಾಷಣವನ್ನು ಮಾಡಿದರು. ಈ ಸಭೆಯಲ್ಲಿ ವಿದ್ಯಾರ್ಥಿಗಳು ಮೈಸೂರು ರಾಜ್ಯದ ಸ್ವಾತಂತ್ರ್ಯಕ್ಕಾಗಿ, ಕನ್ನಡ ಪ್ರಾಂತ್ಯಗಳ ರಚನೆಗಾಗಿ ಮತ್ತು ಜವಾಬ್ದಾರಿ ಸರ್ಕಾರದ ಸ್ಥಾಪನೆಗಾಗಿ ಹೋರಾಟವನ್ನು ಮಾಡಬೇಕು, ಅದಕ್ಕಾಗಿಯೇ ಸಿದ್ಧರಾಗಬೇಕೆಂದು ಕರೆ ಕೊಟ್ಟಿದ್ದರು.

ವಿದ್ಯಾರ್ಥಿ ಕಾಂಗ್ರೆಸ್ ಸಮಿತಿಯೂ ಇದೇ ೧೯೪೭ ನೇ ಸೆಪ್ಟೆಂಬರ್ ೧ ರಂದು ಮೈಸೂರು ಅರಮನೆಯ ಮುಂದೆ ಬೃಹತ್ ಸತ್ಯಾಗ್ರಹವನ್ನು ನಡೆಸಲಾಗುವುದು ಎಂದು ಘೋಷಿಸಿತು. ಈ ಸಂಬಂಧವಾಗಿಯೇ ರಾಷ್ಟ್ರದ ರಾಜಧಾನಿಯಾಗಿರುವಂತಹ ದೆಹಲಿಯಲ್ಲಿ ಪ್ರಸಾರ ಶಾಖೆಯೊಂದನ್ನು ತೆರೆಯಲಾಗಿತ್ತು. ಏಕೆಂದರೆ ಇದು ರಾಷ್ಟ್ರವೊಂದರ ಮತ್ತು ವಿವಿದೆಡೆಯಲ್ಲಿರುವ ವಿದ್ಯಾರ್ಥಿಗಳ ಗಮನವನ್ನು ಹೆಚ್ಚು ಸೆಳೆದು ಅವರ ಸಲಹೆಗಳನ್ನು ಹಾಗೂ ಸಹಕಾರಗಳನ್ನು ಪಡೆಯುವುದು ಮಹತ್ವವಾಗಿತ್ತು. ಆ ಕಾರಣಕ್ಕಾಗಿಯೇ ಮೈಸೂರು ಪ್ರಾಂತ್ಯದ ವಿದ್ಯಾರ್ಥಿ ಕಾಂಗ್ರೆಸ್ ಸಮಿತಿಯ ಪ್ರತಿನಿಧಿಯಾಗಿ ಗುರುಲಿಂಗಪ್ಪ ಜವಳಿ ಅವರು ದೆಹಲಿಗೆ ಹೋಗಿದ್ದರು. ಇದು ಕೂಡ ವಿದ್ಯಾರ್ಥಿಗಳು ಭಾರತದ ಸ್ವಾತಂತ್ರ್ಯ ಚಳವಳಿಯಲ್ಲಿ ತಮ್ಮನ್ನು ತಾವೂ ಹೇಗೆ ತೊಡಗಿಸಿ ಕೊಂಡಿದ್ದರು ಎಂಬುವುದಕ್ಕೆ ಹಿಡಿದ ಕನ್ನಡಿಯಾಗಿದೆ. ಮೈಸೂರು ಅರಮನೆಯ ಮುಂದೆ ವಿದ್ಯಾರ್ಥಿಗಳು ಸತ್ಯಾಗ್ರಹವನ್ನು ಮಾಡಿದರು.

ರಾಷ್ಟ್ರ ಹಾಗೂ ಮೈಸೂರು ರಾಜ್ಯದಲ್ಲಿ ಅನೇಕ ನಾಯಕರುಗಳು ಉಸ್ತುವಾರಿ ಸರ್ಕಾರವನ್ನು ರಚಿಸಿ ಕೊಳ್ಳುವ ಹಂಬಲದಲ್ಲಿದ್ದರು ಹಾಗೂ ಜ್ವಲಂತ ಸಮಸ್ಯೆಗಳನ್ನು ಬಗೆಹರಿಸಿ ಕೊಳ್ಳಬಹುದು ಎಂಬುವುದು ಅವರ ಮನದಲ್ಲಿ ಒಡ ಮೂಡಿತ್ತು. ಮೈಸೂರು ರಾಜ್ಯದ ನಾಯಕರಾಗಿದ್ದಂತಹ ಎಚ್.ಚೆನ್ನಯ್ಯ ಅವರು ಅಖಿಲ ಕರ್ನಾಟಕ ವಿದ್ಯಾರ್ಥಿ ಕಾಂಗ್ರೆಸ್ ಸಮಿತಿಯು ಈಗಾಗಲೇ ಘೋಷಿಸಿರುವ ಅರಮನೆಯ ಮುಂದೆ ಮಾಡಲಿರುವ ಸತ್ಯಾಗ್ರಹವನ್ನು ಮುಂದು ಹಾಕಬೇಕು ಎಂಬ ಸೂಚನೆಯನ್ನು ಕೂಡ ಕೊಟ್ಟಿದ್ದರು, ಆದರೆ ಮೈಸೂರು ರಾಜ್ಯ ಕಾಂಗ್ರೆಸ್ ಸಮಿತಿ ಮತ್ತು ವಿದ್ಯಾರ್ಥಿ ಕಾಂಗ್ರೆಸ್ ಸಮಿತಿಗಳ ಮಾದರಿ ಕಾರ್ಯಕ್ರಮಗಳಂತೆಯೇ ರಾಜಧಾನಿಯ ಎಲ್ಲಾ ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳು ಕೂಡ ಇದೇ ೧೯೪೭ನೇ ಸೆಪ್ಟೆಂಬರ್ ೧೧ ಕ್ಕೆ ಹರತಾಳವನ್ನು ಆಚರಿಸಬೇಕು ಎಂದು ವಿದ್ಯಾರ್ಥಿ ಕಾಂಗ್ರೆಸ್ಸಿನ ಕಾರ್ಯದರ್ಶಿಯಾಗಿದ್ದ ಶಾಂತರಾಜ್ ಎಂಬುವರು ಕರೆಯನ್ನು ಕೊಟ್ಟಿದ್ದರು.

## ೧೯೪೭ನೇ ಸೆಪ್ಟಂಬರ್ ೧೧

೧೯೪೭ ನೇ ಸೆಪ್ಟಂಬರ್ ೧೧ ರ ಬೆಳಗ್ಗೆ ೯ ಕ್ಕೆ ಸುಬ್ಬರಾಯ್ಯನ ಕೆರೆಯ ಮೈದಾನಕ್ಕೆ ಬಂದು ಸೇರಬೇಕು. ಅಲ್ಲಿ ಪ್ರಾಂತ್ರ್ಯ ಕಾಂಗ್ರೆಸ್ ಸಮಿತಿ ಮತ್ತು ವಿದ್ಯಾರ್ಥಿ ಕಾಂಗ್ರೆಸ್ ಸಮಿತಿಗಳು ಆಯೋಜಿಸಿರುವಂತಹ ತ್ರಿವರ್ಣ ಧ್ವಜಾರೋಹಣ ಸಮಾರಂಭದಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು. ಅನಂತರ ಪ್ರತಿಯೊಂದು ಶಾಲಾ–ಕಾಲೇಜುಗಳ ಎಲ್ಲಾ ವಿದ್ಯಾರ್ಥಿಗಳು ಮಹಾರಾಜ ಕಾಲೇಜಿನ ಮೈದಾನಕ್ಕೆ ಬಂದು ಬಹಿರಂಗ ಸಭೆಯಲ್ಲಿ ಭಾಗವಹಿಸಬೇಕು ಎಂದು ಕರೆಯನ್ನು ಕೊಟ್ಟಿದ್ದರು. ಅದರಂತೆ ಪ್ರತಿಯೊಂದು ಶಾಲಾ ಕಾಲೇಜಿನ ವಿದ್ಯಾರ್ಥಿ ವಿದ್ಯಾರ್ಥಿನಿಯರು ಸೆಪ್ಟಂಬರ್ ೧೧ ರಂದು ಹರತಾಳಕ್ಕೆ ಸುಬ್ಬರಾಯ್ಯನ ಕೆರೆ ಹತ್ತಿರ ಬಂದು ಶಾಂತವಾಗಿಯೇ ಕಾರ್ಯಕ್ರಮವನ್ನು ಯಶಸ್ವೀ ಗೊಳಿಸಿದರು.

## ೧೯೪೭ ನೇ ಸೆಪ್ಟೆಂಬರ್ ೩

ಮೈಸೂರು ನಗರದಲ್ಲಿರುವ ಸುಬ್ಬರಾಯನ ಕೆರೆಯಲ್ಲಿ ಸ್ವಾತಂತ್ರ್ಯವಾದಿಗಳು ಧ್ವಜಾರೋಹಣ ಮಾಡಿದರು, ಪೊಲೀಸರು ಮಧ್ಯಪ್ರವೇಶಿಸಿ ೧೯೪೭ ನೇ ಸೆಪ್ಟೆಂಬರ್ ೩ ರಂದು ತ್ರಿವರ್ಣ ಧ್ವಜವನ್ನು ತೆರವು ಗೊಳಿಸಿದರು.



## ೧೯೪೭ ನೇ ಸೆಪ್ಟಂಬರ್ ೪

ರಂದು ಮೈಸೂರು ಚಲೋ ಚಳವಳಿಯು ಆರಂಭಗೊಂಡಿತು. ಇಂದು ಅಧಿಕೃತವಾಗಿ ಘೋಷಿಸಿ ಆಯೋಜಿಸಿದ್ದ ಅಂದಿನ ಮೈಸೂರು ರಾಜ್ಯದಲ್ಲಿನ ವಿವಿಧ ಭಾಗಗಳಿಂದಲೂ ಸ್ವಯಂಸೇವಕರಿಗೂ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಕರೆಯನ್ನು ನೀಡಿತ್ತು. ಈವರೆಗೆ ಸ್ಪಂದಿಸಿರುವ ರಾಜ್ಯದಲ್ಲಿನ ಎಲ್ಲಾ ಭಾಗಗಳಲ್ಲಿನ ವಿದ್ಯಾರ್ಥಿಗಳು, ಕಾರ್ಮಿಕರು, ರೈಲ್ವೆ ನೌಕರರು ಸೇರಿದಂತೆ ಎಲ್ಲರೂ ಮೈಸೂರು ಸಂಸ್ಥಾನದ ಆಡಳಿತದ ವಿರುದ್ಧ ದೊಂಬಿಗಳನ್ನು ನಡೆಸಲು ಮೈಸೂರು ಮಹಾನಗರದತ್ತ ಧಾವಿಸಿದರು. ಮದ್ಯ ಅಂಗಡಿಗಳ ಮೇಲೆ ದಾಳಿ ನಡೆಸಿದರು. ಮತ್ತೆ ತಾಲ್ಲೂಕು ಕಚೇರಿಗಳಿಗೆ ಘೇರಾವ್ ಹಾಕಲಾಯಿತು. ಟೆಲಿಗ್ರಾಫಿಕ್ ವೈರ್‌ಗಳನ್ನು ಬೇರ್ಪಡಿಸಲಾಯಿತು ಮತ್ತು ರೈಲು ಮಾರ್ಗಗಳಲ್ಲಿ ಹಳಿಗಳನ್ನು ತೆಗೆದರು, ಹೀಗೆ ಪ್ರತಿಭಟನೆಯು ತೀವ್ರ ತರಹದ ಸ್ವರೂಪವನ್ನು ಪಡೆದು ಕೊಂಡಿತು.

ಮೈಸೂರು ನಗರದಲ್ಲಿನ ವಿದ್ಯಾರ್ಥಿಗಳು ನಡೆಸಿರುವ ಹರತಾಳಕ್ಕೆ ಬೆಂಗಳೂರು ಮಹಾನಗರದಲ್ಲಿಯೂ ಕೂಡ ಹೆಚ್ಚಿನ ಪ್ರೋತ್ಸಾಹ ಹಾಗೂ ಸಹಕಾರವನ್ನು ಅಲ್ಲಿನ ವಿದ್ಯಾರ್ಥಿಗಳ ಸಮೂಹವು ನೀಡಿತ್ತು. ಈ ಕಾರಣವಾಗಿಯೇ ೧೯೪೭ನೇ ಸೆಪ್ಟೆಂಬರ್ ೪ ರಂದು ಬೆಂಗಳೂರು ನಗರದಲ್ಲಿನ ಕೇಂದ್ರೀಯ ಪೊಲೀಸ್ ಠಾಣೆಯ ಬಳಿ ವಿದ್ಯಾರ್ಥಿಗಳ ಅಸಾಧ್ಯ ಜನಸಂದಣಿಯಲ್ಲಿಯೇ ಸೇರಿತ್ತು. ಹೀಗೆ ಗುಂಪುಗಳಾಗಿದ್ದಂತಹ ವಿದ್ಯಾರ್ಥಿಗಳನ್ನು ಚದುರಿಸಲು ಅಲ್ಲಿನ ಪೊಲೀಸರು ಗಾಳಿಯಲ್ಲಿ ಗುಂಡು ಹಾರಿಸಿದರು. ಅದರ ಪರಿಣಾಮವಾಗಿ ಒಬ್ಬ ವಿದ್ಯಾರ್ಥಿಯೂ ಸ್ಥಳದಲ್ಲಿಯೇ ಸಾವನ್ನಪ್ಪಿ, ಅಲ್ಲಿಯ ಐದು ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಗಾಯಗೊಂಡಿದ್ದರು ಎಂಬುದಕ್ಕೆ ದಾಖಲೆಗಳು ದೊರಕುತ್ತವೆ. ಹಾಗೆಯೇ ಇದೇ ದಿನ ಮತ್ತೊಂದು ಬಡಾವಣೆಯಾಗಿರುವ ಬಸವನಗುಡಿಯಲ್ಲಿಯೂ ಕೂಡ ಪೊಲೀಸರು ಹಲವು ವಿದ್ಯಾರ್ಥಿಗಳ ಗುಂಪುಗಳ ಮೇಲೆ ಗುಂಡನ್ನು ಆರಿಸಿರುವ ಕಾರಣ ಮತ್ತು ಪರಿಣಾಮವಾಗಿಯೇ ಆ ಸ್ಥಳದಲ್ಲಿದ್ದಂತಹ ಇಬ್ಬರು ವಿದ್ಯಾರ್ಥಿಗಳು ಗಾಯಗೊಂಡಿರುವ ಬಗೆಗೆ ಅಂದಿನ ಪತ್ರಿಕೆಗಳಲ್ಲಿ ವರದಿಯಾಗಿದೆ. ಮೈಸೂರು ನಗರದ ವಿವಿಧ ಸ್ಥಳಗಳಾದಂತಹ ಡಿ.ಬನುಮಯ್ಯ ಪ್ರೌಢಶಾಲೆ ಹಾಗೂ ಕೃಷ್ಣರಾಜೇಂದ್ರ ಗಿರಣಿ ಸಮೀಪದಲ್ಲಿ ಪೊಲೀಸರು ಅನೇಕ

ಅಮಾಯಕ ನಿರಾಪರಾಧಿ ವಿದ್ಯಾರ್ಥಿಗಳ ಮೇಲೆ ಲಾಠಿ ಪ್ರಹಾರವನ್ನು ಮಾಡಿದ್ದರು.

ಬನಪ್ಪ ಪಾರ್ಕಿನಲ್ಲಿ ಕೆ.ಸಿ.ರೆಡ್ಡಿ ಅವರು ಸತ್ಯಾಗ್ರಹ ಘೋಷಣೆ ಮಾಡಿ ಹಿಂದೆ ಸುಭಾಸ್ ಚಂದ್ರಬೋಸ್ ಹೇಗೆ 'ಡೆಲ್ಲಿಚಲೋ'ಎಂದು ಘೋಷಣೆ ಮಾಡಿದರೋ ಅದೇ ರೀತಿ ನಾವಿಂದು ಮೈಸೂರು ಕಾಂಗ್ರೆಸ್‌ನವರು 'ಮೈಸೂರು ಚಲೋ' ಎಂದು ಘೋಷಣೆ ಮಾಡುತ್ತಾ ನಮ್ಮ ಈ ನಾಲ್ಕು ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಮೈಸೂರು ಅರಮನೆಯ ಬಳಿ ಈ ತಿಂಗಳು ೪ ನೇ ತಾರೀಕಿನಿಂದ ಸತ್ಯಾಗ್ರಹ ಆರಂಭಿಸಲು ಉದ್ದೇಶಿಸಿದ್ದೇವೆ ಎಂದಿದ್ದರು. ಆ ನಾಲ್ಕು ಬೇಡಿಕೆಗಳು ಯಾವುವೆಂದರೆ;

೧. ಮೈಸೂರು ಸಂಸ್ಥಾನದಲ್ಲಿ ಕೂಡಲೇ ಪೂರ್ಣಜವಾಬ್ದಾರಿ ಸರ್ಕಾರದ ಘೋಷಣೆ ಮಾಡಬೇಕು.

೨. ಪೂರ್ಣ ಜವಾಬ್ದಾರಿ ಸರ್ಕಾರ ಸ್ಥಾಪನೆಯ ಉದ್ದೇಶಕ್ಕಾಗಿ ಒಂದು ರಾಜ್ಯಾಂಗ ರಚನೆಯಾಗುವವರೆಗೆ ಶಾಸನಸಭೆಗಳ ವಿಶ್ವಾಸಪಾತ್ರವಾದ ಒಂದು ತಾತ್ಕಾಲಿಕ ಮಂತ್ರಿಮಂಡಲ ರಚಿಸಬೇಕು.

೩. ರಾಜ್ಯಾಂಗವನ್ನು ರಚಿಸಲು ಎರಡೂ ಸಭೆಗಳಿಂದ ಚುನಾಯಿತರಾದ ಪ್ರತಿನಿಧಿಗಳಿಂದ ಕೂಡಿದ ರಾಜ್ಯಾಂಗ ರಚನಾ ಸಭೆಯನ್ನು ರಚಿಸಬೇಕು.

೪. ಬಂಧನದಲ್ಲಿರುವ ಎಲ್ಲ ರಾಜಕೀಯ ಖೈದಿಗಳನ್ನು ಬಿಡುಗಡೆ ಮಾಡಬೇಕು.

ಅಷ್ಟರೊಳಗೆ ಗೌರವಾನ್ವಿತ ಮಹಾರಾಜರು ನಮ್ಮ ಬೇಡಿಕೆಗಳನ್ನು ಈಡೇರಿಸುವುದಾದರೆ.ಮೈಸೂರಿಗೆ ತೆರಳಿ ಪ್ರಭುಗಳನ್ನು ರಾಜಭಕ್ತಿಯುತವಾಗಿ ಅಭಿನಂದಿಸೋಣ. ಮೈಸೂರು ಅರಮನೆಯ ಮುಂದೆ ಸತ್ಯಾಗ್ರಹ ನಡೆಸುವವರ ಉದ್ದೇಶ ಮಹಾರಾಜರ ಕೀರ್ತಿಗಾಗಲಿ, ಗೌರವಕ್ಕಾಗಲಿ ಯಾವ ವಿಧವಾದ ಕುಂದುಂಟು ಮಾಡುವುದಲ್ಲ ಎಂದು ಅಭಿನಂಧನಾ ಪೂರ್ವಕವಾಗಿ ಘೋಷಿಸುತ್ತೇವೆ. ಪ್ರಜೆಗಳಿಗೂ, ಪ್ರಭುಗಳಿಗೂ ಮಧ್ಯೆ ಇರುವ ಅಡ್ಡಿಯನ್ನು ಕೊನೆಗಾಣಿಸಿ, ಉಭಯತ್ರರಿಗೂ ನಿಕಟಸಂಪರ್ಕ ಉಂಟು ಮಾಡುವುದೇ ಅರಮನೆಯ ಮುಂದೆ ಸತ್ಯಾಗ್ರಹ ಹೂಡುವುದರ ಗುರಿ ಎಂದು ಕೆ.ಸಿ. ರೆಡ್ಡಿ ಅವರು ಸ್ಪಷ್ಟಪಡಿಸಿದರು.



೧೯೪೭ನೇ ಸೆಪ್ಟೆಂಬರ್ ೪ ರಂದು ಶ್ರೀ ಕೆ.ಸಿ.ರೆಡ್ಡಿ ಅವರು ಮೈಸೂರು ಅರಮನೆ ಸತ್ಯಾಗ್ರಹಕ್ಕೆ ಹೊರಡುವ ಸಿದ್ಧತೆಯಲ್ಲಿ ಇದ್ದರು. ಅಷ್ಟರಲ್ಲಿ ಸೆಪ್ಟೆಂಬರ್ ಮೂರರಂದೇ ಒಂದೂವರೆ ಗಂಟೆ ಸಮಯದಲ್ಲಿ ಶ್ರೀಗಳಾದ ಕೆ.ಸಿ.ರೆಡ್ಡಿ, ಟಿ.ಸುಬ್ರಹ್ಮಣ್ಣ, ಎಂ.ಹುಚ್ಚೇಗೌಡ, ಕೆ.ಆರ್.ಮಾಧವರಾವ್, ಕೆ.ಎಸ್.ಕುಮಾರನ್, ಎಚ್.ಕೆ.ವೀರಣ್ಣಗೌಡ, ಎ.ಜಿ.ರಾಮಚಂದ್ರರಾವ್, ಎಸ್.ಚೆನ್ನಯ್ಯ, ಎಚ್.ಸಿದ್ದಯ್ಯ, ಕೆ.ಟಿ.ಭಾಷ್ಯಂ, ಎ.ಜಿ, ಬಂದೀಗೌಡ ಮುಂತಾದ ಎಲ್ಲ ನಾಯಕರನ್ನೂ ಬಂಧಿಸಲಾಯಿತು.

## ರಾಮಸ್ವಾಮಿ ವೃತ್ತ ;– ೧೯೪೭ ನೇ ಸೆಪ್ಟೆಂಬರ್ ೫

ರಾಮಸ್ವಾಮಿ ವೃತ್ತವು ಜೆ.ಎಲ್.ಬಿ.ರಸ್ತೆ ಮತ್ತು ಚಾಮರಾಜ ಜೋಡಿ ರಸ್ತೆಗಳು ಸೇರ್ಪಡೆ ಗೊಳ್ಳಲಿರುವ ವೃತ್ತವಾಗಿದೆ. ಇದು ಮೈಸೂರಿನ ಕೇಂದ್ರ ಸ್ಥಳದಿಂದ ೧.೨ ಕಿ.ಮೀ ದೂರದಲ್ಲಿದೆ. ಸ್ವಾತಂತ್ರ್ಯ ಹೋರಾಟದ ಕೇಂದ್ರ ಬಿಂದು ಮೈಸೂರಿನ ಸುಬ್ಬರಾಯನಕೆರೆ ಮೈದಾನದಿಂದ ೬೫೦ ಮೀಟರ್ ದೂರದಲ್ಲಿ ಇದೆ. ಈ ವೃತ್ತಕ್ಕೆ ಐದು ದೀಪದ ವೃತ್ತ (ಫೈವ್‌ಲೈಟ್ ಸರ್ಕಲ್) ಎಂದು ಕರೆಯುತ್ತಾರೆ. ವೃತ್ತದ ಪೂರ್ವ–ಪಶ್ಚಿಮವಾಗಿ, ಪೂರ್ವಕ್ಕೆ ೧೦೦ ಅಡಿ ರಸ್ತೆ, ೧೦೦ ಅಡಿ ರಸ್ತೆ ಮುಖಾಂತರ ಎಡಭಾಗಕ್ಕೆ ಸಾಗಿದರೆ ಸ್ವಾತಂತ್ರ್ಯ ಹೋರಾಟಗಾರರ ಸ್ಮಾರಕ ಉಧ್ಯಾನವನ, ಅದೇ ಸ್ಥಳದಲ್ಲಿ ಸುಬ್ಬರಾಯನ ಕೆರೆ ಇತ್ತು (ಈಗ ಮುಚ್ಚಲ್ಪಟ್ಟಿದೆ). ಈ ಕೆರೆಯ ಆವರಣದಲ್ಲೇ ಎಲ್ಲಾ ಬಹುಮುಖ್ಯವಾದ ಸ್ವಾತಂತ್ರ್ಯ ಚಳುವಳಿಯ ಸಭೆ, ಸಮಾರಂಭಗಳು ನಡೆಯುತ್ತಿದ್ದವು. ವೃತ್ತದ ಪಶ್ಚಿಮ ದಿಕ್ಕಿಗೆ ೧೦೦ ಅಡಿ ರಸ್ತೆಯ ಮುಂದೆ ಸಾಗಿದರೆ ಎಡಭಾಗಕ್ಕೆ ಮಹಾರಾಜ ಕಾಲೇಜು ಹಾಸ್ಟಲ್ ಇದೆ. ಬಲ ಭಾಗಕ್ಕೆ ಮಹಾರಾಜ ಕಾಲೇಜು, ಯುವರಾಜ ಕಾಲೇಜುಗಳು ಇವೆ. ವೃತ್ತದ ದಕ್ಷಿಣ ದಿಕ್ಕಿನ ಎಡ ಭಾಗಕ್ಕೆ ಸಾಗಿದರೆ ಹಾರ್ಡ್ವಿಕ್ ಶಾಲೆ ಇದೆ, ಮುಂದೆ ಆರ್.ಟಿ.ಓ ಸರ್ಕಲ್ ಇದೆ. ವೃತ್ತದ ಉತ್ತರ ದಿಕ್ಕಿನ ಎಡಭಾಗದ ರಸ್ತೆ ಪಕ್ಕದಲ್ಲಿ ಸಾಗ ಬೇಕಾದರೆ ಮಹಾರಾಜ ಕಾಲೇಜು, ಯುವರಾಜ ಕಾಲೇಜುಗಳು ಇವೆ.

ಮೈಸೂರು ರಾಜ್ಯದ ಸ್ವಾತಂತ್ರ್ಯಕ್ಕಾಗಿ, ಕನ್ನಡ ಪ್ರಾಂತ್ಯಗಳ ರಚನೆಗಾಗಿ ಮತ್ತು ಜವಾಬ್ದಾರಿ ಸರ್ಕಾರದ ಸ್ಥಾಪನೆಗಾಗಿ ೧೯೪೭ ನೇ ಸೆಪ್ಟಂಬರ್‌ನಲ್ಲಿ ಹೋರಾಟಗಳು ಆರಂಭವಾದವು. ಮೈಸೂರು ಮಹಾನಗರದಲ್ಲಿ ೧೯೪೭

ನೇ ಸೆಪ್ಟಂಬರ್ ೫ ರಂದು ಬೆಳಿಗ್ಗೆ ೧೧.೦೦ ಗಂಟೆಗೆ ವಿದ್ಯಾರ್ಥಿಗಳು ೧೦೦ ಅಡಿ ರಸ್ತೆಯ ಐದು ದೀಪದ ಹತ್ತಿರ ಮುಷ್ಕರವನ್ನು ಮಾಡಲು ಸಜ್ಜುಗೊಂಡಿದ್ದರು. ಹಾರ್ಡ್ವಿಕ್ (ಮೊದಲು ಮೆಥಾಡಿಸ್ಟ್ ಸ್ಕೂಲ್ ಎಂದು ಕರೆಯಲ್ಪಡುವ ಶಾಲೆ) ಪ್ರೌಢಶಾಲೆಯ ರಾಮಸ್ವಾಮಿ ಎಂಬ ವಿದ್ಯಾರ್ಥಿಯು ಸಂಬಂಧಿಕರ ಮನೆಯಲ್ಲಿದ್ದು ಶಾಲೆಗೆ ಹೋಗುತ್ತಿದ್ದನು. ಪರಿಸ್ಥಿತಿ ಹತೋಟಿ ಮೀರುತ್ತಿರುವುದನ್ನು ಮನಗಂಡ ಜಿಲ್ಲಾಧಿಕಾರಿ ಜಿ.ಎನ್.ನಾಗರಾಜರಾವ್ ಕುದುರೆ ಏರಿ ಸ್ಥಳಕ್ಕೆ ಬಂದರು. ಮೆರವಣಿಗೆಯಲ್ಲಿದ್ದ ಯುವಕರು ಮುಂದೆ ಹೋಗಲೇ ಬೇಕೆಂದು ಹಠ ಮಾಡಿ ಮುನ್ನುಗ್ಗಿದರು. ರಾಮಸ್ವಾಮಿ ಗುಂಪಿನ ಮುಂಚೂಣಿಯಲ್ಲಿದ್ದ. ಮುಂದೆ ಬಂದರೆ ಗುಂಡು ಹೊಡೆಯುವುದಾಗಿ ಪೊಲೀಸರು ಎಚ್ಚರಿಸಿದರು. ಗುಂಡು ರಾಮಸ್ವಾಮಿಗೆ ತಾಗಿ ಅಲ್ಲಿಯೇ ಕೊನೆ ಉಸಿರು ಎಳೆದನು.

ರಾಮಸ್ವಾಮಿಯು ಮೂಲತಃ ಅರಸೀಕೆರೆ ಸಮೀಪದ ಬಾಣಾವರದ ಗ್ರಾಮದವನು. ಇವರ ತಂದೆಯ ಹೆಸರು ತಮ್ಮಯ್ಯ. ಆ ಕಾಲಘಟ್ಟದಲ್ಲಿ ಮೈಸೂರಿನ ಹಳ್ಳದಕೇರಿಯಲ್ಲಿನ ಅವರ ಚಿಕ್ಕಮ್ಮನ ಮನೆಯಲ್ಲಿ ರಾಮಸ್ವಾಮಿಯವರು ವಾಸವಾಗಿದ್ದರು.

ತಕ್ಷಣ ಈ ವೃತ್ತದ ಹತ್ತಿರದಲ್ಲಿದ್ದ ಮಹಾರಾಜ ಕಾಲೇಜು ವಿದ್ಯಾರ್ಥಿನಿಲಯದ ೧೨೦ ವಿದ್ಯಾರ್ಥಿಗಳ ಪೈಕಿ ೬೦ ವಿದ್ಯಾರ್ಥಿಗಳಿಗೆ ವಿಶೇಷ ವಾಹನಗಳ ವ್ಯವಸ್ಥೆಯನ್ನು ವಿದ್ಯಾರ್ಥಿ ಕಾಂಗ್ರೆಸ್ ಸಮಿತಿಯವರು ಮಾಡಿ ಬೆಂಗಳೂರು ಹಾಗೂ ಹಾಸನಗಳಿಗೆ ಸುರಕ್ಷಿತವಾಗಿಯೇ ಕಳಿಸಿ ಕೊಡಲಾಯಿತು. ಉಳಿದಂತಹ ೬೦ ವಿದ್ಯಾರ್ಥಿಗಳಿಗೆ ಅವರವರ ಸ್ವಂತ ಸ್ಥಳಗಳಿಗೆ ಕಳುಹಿಸಿ ಕೊಡುವ ವ್ಯವಸ್ಥೆಯನ್ನು ಕೂಡ ಇದೇ ವಿದ್ಯಾರ್ಥಿ ಕಾಂಗ್ರೆಸ್ ಸಮಿತಿಯು ಕಲ್ಪಿಸಿ ಕೊಟ್ಟಿತು. ವಿದ್ಯಾರ್ಥಿ ರಾಮಸ್ವಾಮಿಯು ಪೊಲೀಸರ ಗೋಲಿಬಾರಿಗೆ ಮರಣ ಹೊಂದಿರುವ ಕಾರಣ ಮತ್ತು ಪರಿಣಾಮದಿಂದಾಗಿ ಮೈಸೂರು ಮಹಾನಗರದಲ್ಲಿ ೪೮ ಗಂಟೆಗಳ ಕಾಲ ಕರ್ಫ್ಯೂವನ್ನು ವಿಧಿಸಲಾಗಿತ್ತು. ಈ ಕರ್ಫ್ಯೂನಲ್ಲಿ ಮೈಸೂರು ನಗರದಲ್ಲಿನ ವಿವಿಧ ಪ್ರಮುಖ ಬಡಾವಣೆಗಳು ಹಾಗೂ ಜನಸಂದಣಿಯ ಸ್ಥಳಗಳಲ್ಲಿ ಕಟ್ಟೆಚ್ಚರವನ್ನು ಕೂಡ ವಹಿಸಲಾಗಿತ್ತು.

ಈ ಘಟನೆಯಲ್ಲಿ ಹುತಾತ್ಮರಾಗಿರುವಂತಹ ಬಾಣವಾರದವನಾದ



ರಾಮಸ್ವಾಮಿ ಅವರ ಹೆಸರನ್ನು ಇಡ ಬೇಕೆಂದು ಹೋರಾಟಗಾರರ ಹೋರಾಟಗಳು ಬಲು ಖಾರವಾಗಿಯೇ ನಡೆದವು. ಕನ್ನಡ ಕ್ರಾಂತಿದಳದ ಅಧ್ಯಕ್ಷ ನ.ನಾಗಲಿಂಗಸ್ವಾಮಿಯವರ ನಿರಂತರ ಹೋರಾಟದ ಫಲವಾಗಿ ಐದು ದೀಪಗಳಿದ್ದ ವೃತ್ತಕ್ಕೆ ಮೃತನಾದ ರಾಮಸ್ವಾಮಿ ವೃತ್ತವೆಂದು ಅಧಿಕೃತವಾಗಿ ಮಹಾ ನಗರ ಪಾಲಿಕೆ ಘೋಷಿಸಿತು. ಇದು ವಿದ್ಯಾರ್ಥಿಗಳ ಮತ್ತು ಸ್ವಾತಂತ್ರ್ಯ ಹೋರಾಟಗಾರಿಗೆ ಸಂದ ಜಯ ಮತ್ತು ಸಾಕ್ಷಿ ಭೂತ ಆಗಿದೆ. ಈ ವೃತ್ತದಲ್ಲಿ ನಡೆದ ಗೋಲಿಬಾರಿಗೆ ಬಾಣವಾರದವನಾದ ರಾಮಸ್ವಾಮಿ ಜೊತೆಗೆ ತೋರಾನಾಯಕ್. ರಂಗ ಎಂಬ ಇಬ್ಬರು ತರುಣರು ಬಲಿಯಾಗಿದ್ದಾರೆ.

ಇದಾದ ನಂತರ ಚಂದ್ರಶೇಖರ್ ಎಂಬ ವಿದ್ಯಾರ್ಥಿಯು ಅರಮನೆಯ ಮೇಲೆ ತ್ರಿವರ್ಣ ಧ್ವಜವನ್ನು ಹಾರಿಸುವಲ್ಲಿ ಯಶಸ್ವಿಯನ್ನು ಕಂಡರು. ಈ ಚಳವಳಿಯಿಂದಾಗಿ ಕಾರಾಗೃಹಗಳು ಸಾಕಷ್ಟು ತುಂಬಿದ್ದವು. ಇದರಿಂದ ದೂರ ದೂರದ ಸ್ಥಳಗಳಿಗೆ ವಾಹನಗಳಲ್ಲಿ ಕರೆದು ಕೊಂಡು ಹೋಗಿ ರಾತ್ರಿ ವೇಳೆ ಬಿಟ್ಟು ಬರುತ್ತಿದ್ದರು. ಮೈಸೂರು ಚಲೋ ಚಳವಳಿಯಲ್ಲಿ ವಿದ್ಯಾರ್ಥಿಗಳು ಮತ್ತು ಸತ್ಯಾಗ್ರಹಿಗಳು ೬೯ ಜನರು ಸಾವನ್ನಪ್ಪಿದ್ದರು. ೨೨೯ ಜನರು ಗಾಯಗೊಂಡಿದ್ದಾರೆ ಎಂಬುದನ್ನು ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ದಾಖಲಿಸಿದೆ.

ಮೈಸೂರು ರಾಜ್ಯದಲ್ಲಿನ ವಿದ್ಯಾರ್ಥಿಗಳ ಚಳವಳಿಯು ಮತ್ತು ಅನಂತರ ಪತ್ರಿಕೆಗಳು ಕೂಡ ತಮ್ಮದೇ ಆದಂತಹ ಪಾತ್ರವನ್ನು ನಿರ್ವಹಿಸಿದವು. ಆದರೆ ಈಗ ಇರುವಷ್ಟು ಪತ್ರಿಕೆಗಳು ಮತ್ತು ಆ ಪತ್ರಿಕೆಗಳಿಗೆ ಇರುವ ಸ್ವಾತಂತ್ರ್ಯವೂ ಅಂದೂ ಇರಲಿಲ್ಲ. ಅಂದು ಪೊಲೀಸರು ಪತ್ರಿಕೆಗಳನ್ನು ವಶಪಡಿಸಿ ಕೊಳ್ಳುತ್ತಿದ್ದರು. ಆದರೂ ಸಹ ಜನರಿಗೆ ಸ್ವಾತಂತ್ರ್ಯ ಚಳವಳಿಯನ್ನು ತಿಳಿಸುವ ಸಲುವಾಗಿ ರಹಸ್ಯವಾಗಿಯೇ ಪತ್ರಿಕೆಗಳನ್ನು ಮುದ್ರಿಸಿ ಜನರಿಗೆ ಹಂಚಿರುವಂತಹ ಸಂದರ್ಭಗಳನ್ನು ಕೂಡ ಕಾಣಬಹುದು. ಅಂದಿನ ಆಡಳಿತಗಾರರು ಬ್ರಿಟಿಷರ ಕಾರಣದಿಂದಾಗಿಯೇ ಸತ್ಯಾಗ್ರಹಿಗಳಿಗೆ ಮತ್ತು ಸಾಮಾನ್ಯ ಜನರಿಗೆ ವಿವಿಧ ರೀತಿಯಲ್ಲಿ ಕಿರುಕುಳಗಳನ್ನು ಹಾಗೂ ಸಮಸ್ಯೆಗಳನ್ನು ತಂದೊಡ್ಡುತ್ತಿದ್ದರು.

ಪತ್ರಿಕೆಗಳು;– ಪತ್ರಿಕೆಗಳನ್ನು ಸೈಕ್ಲೋಸೇವೆಯಲ್ಲಿ ತಯಾರಿಸಿ ಶಿಬಿರಗಳಲ್ಲಿ ವಿತರಿಸಲಾಗುತ್ತಿತ್ತು. ಸ್ವಾತಂತ್ರ್ಯ ಹೋರಾಟಗಾರರಾದಂತಹ

ಎಚ್.ಎಸ್.ದೊರೆಸ್ವಾಮಿ ಅವರು ಪೌರವಾಣಿ ಎಂಬ ಮುಖವಾಣಿ ಪತ್ರಿಕೆಯನ್ನು ಕೂಡ ಹೊರ ತಂದಿದ್ದರು. ಆದರೆ ಆ ಪತ್ರಿಕೆಯನ್ನು ಸಹ ವಶಪಡಿಸಿ ಕೊಳ್ಳಲಾಗಿತ್ತು. ಆಂಧ್ರಪ್ರದೇಶದಲ್ಲಿ ಈ ಪತ್ರಿಕೆಯನ್ನು ಮತ್ತೇ ಮುದ್ರಿಸಿ ಮೈಸೂರು ನಗರದಲ್ಲಿನ ಸಾರ್ವಜನಿಕರ ನಡುವೆ ರಹಸ್ಯವಾಗಿಯೇ ಹಂಚುವ ಮೂಲಕ ಪ್ರಸಾರವನ್ನು ಮಾಡಲಾಗುತ್ತಿತ್ತು. ಇದೇ ಅಲ್ಲದೇ ಸ್ವಾತಂತ್ರ್ಯ ಚಳವಳಿ ಮೈಸೂರು ರಾಜ್ಯದಲ್ಲಿ ಅಗರಂ ರಂಗಯ್ಯ ಅವರ ನೇತೃತ್ವದಲ್ಲಿ ಸಾಧ್ವಿ ಎಂಬ ಪತ್ರಿಕೆ ಪ್ರಕಟವಾಗುತಿತ್ತು.

ಬ್ರಿಟಿಷರ ಕಣ್ಣುಗಳಿಂದ ತಪ್ಪಿಸಿಕೊಳ್ಳಲು ಈ ಪತ್ರಿಕೆಗಳ ಹೆಸರನ್ನು ಆಗಿಂದಾಗಲೇ ಬದಲಾಯಿಸಲಾಗುತ್ತಿತ್ತು. ಈ ಮೂಲಕವಾಗಿಯೇ ಮೈಸೂರು ರಾಜ್ಯದ ಪತ್ರಿಕೆಗಳು ಸ್ವಾತಂತ್ರ್ಯ ಚಳವಳಿಯ ಪ್ರಖರತೆಯನ್ನು ಹರಡುತ್ತಿದ್ದವು. ಈ ಹಿನ್ನೆಲೆ ಹಿಂದೆ ಬ್ರಿಟಿಷರು ಈ ಪತ್ರಿಕೆಗಳನ್ನು ನಿಷೇಧಿಸಿದ್ದರು. ಆ ಸಂದರ್ಭದಲ್ಲಿ ಅವುಗಳ ನಿರ್ಬಂಧ ಇರುವಾಗಲೆಲ್ಲ ಮೈಸೂರು ರಾಜ್ಯದ ಸ್ವಾತಂತ್ರ್ಯ ಹೋರಾಟಗಾರದಂತಹ ತಗಡೂರು ರಾಮಚಂದ್ರರಾವ್ ಅವರು ಮತ್ತು ಇತರ ಹೋರಾಟಗಾರರು ಸಮಸ್ತ ಸಾರ್ವಜನಿಕರಿಗೆ ಸ್ವಾತಂತ್ರ್ಯ ಚಳುವಳಿಗೆ ಸಂಬಂಧಿಸಿದ ವಿಷಯಗಳನ್ನು ಪ್ರಚಾರಪಡಿಸುವ ಸಲುವಾಗಿಯೇ ತಮ್ಮ ತಮ್ಮ ದೇಹದ ಮೇಲೆ ಸುದ್ದಿ ಬರೆಸಿ ಕೊಳ್ಳುತ್ತಿದ್ದರು. ಆ ಮೂಲಕವಾಗಿಯೇ ದೆಹಲಿಯಿಂದ ಮೈಸೂರಿಗೆ ಸುದ್ಧಿಯೂ ಹೆಚ್ಚು ಹೆಚ್ಚು ಹಬ್ಬುತ್ತಿತ್ತು. ಆದ್ದರಿಂದಲೇ ಬ್ರಿಟಿಷ್ ಹಿಡಿತದಲ್ಲಿದ್ದ ಆಸ್ತಿಪಾಸ್ತಿಗಳನ್ನು ಸತ್ಯಾಗ್ರಹಿಗಳು ತಾವಿರುವಂತಹ ಪ್ರದೇಶಗಳಲ್ಲಿ ನಾಶಪಡಿಸುವುದರೊಂದಿಗೆ ಸ್ವಾತಂತ್ರ್ಯ ಹೋರಾಟವನ್ನು ತೀವ್ರ ಗೊಳಿಸಿದ್ದರು.

## ಮೈಸೂರು ಚಲೋ ಚಳವಳಿ ಹೋರಾಟಗಳು

ಮೈಸೂರು ಮಹಾನಗರದಲ್ಲಿ ನಡೆಯುತ್ತಿದ್ದಂತಹ ಸತ್ಯಾಗ್ರಹಕ್ಕೆ ಸಹಕಾರವನ್ನು ನೀಡಲು ಹಲವು ಭಾಗಗಳಿಂದ ಸತ್ಯಾಗ್ರಹಿಗಳು ಆಗಮಿಸುತ್ತಿದ್ದರು. ೧೯೪೭ ನೇ ಸೆಪ್ಟೆಂಬರ್ ೩೦ ರಂದು ಮೈಸೂರು ನಗರದಲ್ಲಿ ನಡೆದಿರುವಂತಹ ವಿದ್ಯಾರ್ಥಿಗಳ ಮೇಲಿನ ಗೋಲಿಬಾರ್ ಪ್ರಕರಣಕ್ಕೆ ಹಾಗೆಯೇ ಮೈಸೂರು ರಾಜ್ಯದಲ್ಲಿ ಜವಾಬ್ದಾರಿ ಸರ್ಕಾರದ ರಚನೆಗೆ ಒತ್ತಾಯವನ್ನು ಮಾಡುವ ಸಲುವಾಗಿ, ಸತ್ಯಾಗ್ರಹದಲ್ಲಿ ಭಾಗವಹಿಸಲು ತಮಿಳುನಾಡಿನಿಂದ ತಿರುವಾಂಕೂರು ವಿದ್ಯಾರ್ಥಿ ಕಾಂಗ್ರೆಸ್ ಸಮಿತಿಯ ಸದಸ್ಯರು ಆಗಮಿಸಿದ್ದರು. ಆ ಸಮಿತಿಯ ಅಧ್ಯಕ್ಷರಾಗಿದ್ದಂತಹ ಪ್ರಭಾಕರನ್ ಅವರ ನೇತೃತ್ವದಲ್ಲಿ ೧೫ ಜನ ಸತ್ಯಾಗ್ರಹಿಗಳ ತಂಡವು ಮದರಾಸಿನಿಂದ ಮೈಸೂರಿಗೆ ಬಂದಿದ್ದರು. ಕೊಯಮುತ್ತೂರು ಜಿಲ್ಲೆಯ ಬಾವನಿ ಕಾಂಗ್ರೆಸ್ ಸಮಿತಿಯ ಪರವಾಗಿ ಅರಮನೆಯ ಮುಂದೆ ಸತ್ಯಾಗ್ರಹ ಮಾಡಲು ಬಂದಿದ್ದ ಮೂವರು ಸತ್ಯಾಗ್ರಹಿಗಳನ್ನು ಹಾಗೂ ಕೋಲಾರದಿಂದ ಬಂದಿದ್ದಂತಹ ಕೃಷ್ಣನ್ ಅವರನ್ನು ದೊಡ್ಡ ಗಡಿಯಾರದ ಚೌಕ್‌ದ ಬಳಿ ಮೈಸೂರು ಪೊಲೀಸರು ದಸ್ತಗಿರಿ ಮಾಡಿ ಕಾರಾಗೃಹಕ್ಕೆ ಕಳುಹಿಸಿದ್ದರು.

ಮೈಸೂರು ಸಂಸ್ಥಾನದ ಕೇಂದ್ರ ಸ್ಥಾನ ಆಗಿರುವ ಅರಮನೆಯ ಮುಂದೆ ಸತ್ಯಾಗ್ರಹಕ್ಕೆ ಬಂದು ಭಾಗವಹಿಸಿದಂತಹ ಸತ್ಯಮಂಗಲದ ೧೫ ಜನರು ಹಾಗೂ ಕೊಯಮತ್ತೂರಿನ ೨೪ ಜನರಿಗೆ ತಲಾ ಮೂರು ತಿಂಗಳ ಕಾಲ ಕಠಿಣ ಶಿಕ್ಷೆಯನ್ನು ಬೆಂಗಳೂರು ನ್ಯಾಯಾಧೀಶರು ನೀಡಿದ್ದರು ಹಾಗೂ ಅಖಿಲ ಭಾರತೀಯ ವಿದ್ಯಾರ್ಥಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದಂತಹ ಎಂ.ಡಿ.ಜೋಯಿಶಿ ಹಾಗೂ ತಿರುವಾಂಕೂರು ವಿದ್ಯಾರ್ಥಿ ಕಾಂಗ್ರೆಸ್ ಸಮಿತಿಯ ಸಿದ್ಧಾರ್ಥ ಅವರಿಗೆ ಒಂದು ತಿಂಗಳ ಕಾಲ ಸಜೆಯನ್ನು ಕೂಡ ವಿಧಿಸಲಾಗಿತ್ತು. ಈ ಚಳುವಳಿಯಲ್ಲಿ ಇಬ್ಬರು ಹುಡುಗಿಯರು ಕೂಡ ಭಾಗಿಯಾಗಿ ಮೆರವಣಿಗೆಯನ್ನು ನಡೆಸಿದರು. ಈ ಕಾರಣವಾಗಿಯೇ ಅವರಿಗೆ ನ್ಯಾಯಾಲಯದ ಅವಧಿ ಮುಗಿಯುವವರೆಗೆ ನಿಲ್ಲುವ ಶಿಕ್ಷೆಯನ್ನು ವಿಧಿಸಲಾಗಿತ್ತು. ಮುಂದುವರೆದಂತೆ ಅರಮನೆಯ ಸತ್ಯಾಗ್ರಹದಲ್ಲಿ ಭಾಗವಹಿಸಿದಂತಹ ಗೋಪಿಶೆಟ್ಟಿ ಪಾಳ್ಯದ ಇಬ್ಬರು, ಮೂಡುಗೆರೆಯ ಕೃಷ್ಣೇಗೌಡ ಎಂಬುವರು ಮತ್ತು ಪ್ರಮುಖವಾಗಿ ವಿದ್ಯಾರ್ಥಿ ಕಾಂಗ್ರೆಸ್ ಸಮಿತಿಯ ನಾಲ್ಕು ಜನ ವಿದ್ಯಾರ್ಥಿ ಸತ್ಯಾಗ್ರಹಿಗಳನ್ನು ಬಸ್ ನಿಲ್ದಾಣದಲ್ಲಿಯೇ ದಸ್ತಗಿರಿ ಮಾಡಿ ಕಾರಾಗೃಹಕ್ಕೆ ಹಾಕಲಾಗಿತ್ತು.

೧೯೪೭ನೇ ಅಕ್ಟೋಬರ್ ೧೧ ರಂದು ಮೈಸೂರು ಮಹಾನಗರದ ನೂರಡಿ ರಸ್ತೆಯಲ್ಲಿ ಪೊಲೀಸರ ವಾಹನಗಳು ಹೋಗುತ್ತಿರುವಾಗ ವಿದ್ಯಾರ್ಥಿಗಳ ಗುಂಪೊಂದು ಮೆಣಸಿನಕಾಯಿ ಪುಡಿ ಹಾಗೂ ಸೀಗಡಿ ಪುಡಿಯನ್ನು ವಾಹನದ ಮೇಲೆ ಎರಚಲು ಪ್ರಯತ್ನಿಸಿದರು. ಅದನ್ನು ಪೋಲಿಸರು ತಡೆದು ಈ ಪ್ರಕರಣದಲ್ಲಿ

ಭಾಗವಹಿಸಿದ್ದ ಇಪ್ಪತ್ತೈದು ವಿದ್ಯಾರ್ಥಿಗಳನ್ನು ಬಂಧಿಸಿದ್ದರು ಎಂಬುವುದು ದಾಖಲೆಯಾಗಿದೆ.

ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿ ಅವರ ಜಯಂತಿಯ ಅಂಗವಾಗಿ ಮೈಸೂರು ವಿದ್ಯಾರ್ಥಿ ಕಾಂಗ್ರೆಸ್ ಸಮಿತಿಯು ಇದೇ ಅಕ್ಟೋಬರ್ ೦೨ ರಿಂದ ೧೧ ರವರೆಗೆ ಪ್ರತಿದಿನವೂ ಸಭೆ ಸೇರಿ ಚರ್ಚಿಸುವ ತೀರ್ಮಾನವನ್ನು ಮಾಡಿತ್ತು. ಇದರ ಪ್ರಯುಕ್ತ ಮಹಾನಗರದ ಮಹಾ ಜನರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಬಾಪೂಜಿ ಅವರಿಗೆ ಯಶಸ್ಸನ್ನು ಕೋರ ಬೇಕೆಂದು ಮನವಿ ಮಾಡುತ್ತಿದ್ದರು ಹಾಗೂ ಮಹಾತ್ಮಾ ಗಾಂಧೀಜಿ ಅವರಿಗೆ ಯಶಸ್ಸು ದೊರಕಲೀ ಎಂಬ ಜೈಕಾರಗಳು ಹಾಗೂ ಸ್ವಾತಂತ್ರ್ಯ ಚಳುವಳಿಯ ಸಂಭ್ರಮಾಚರಣೆಯ ಘೋ?ಣೆಗಳು ಮೊಳಗಿದವು.

ಮೈಸೂರು ರಾಜ್ಯದ ವಿದ್ಯಾರ್ಥಿ ಕಾಂಗ್ರೆಸ್ ಸಮಿತಿಯು ೧೯೪೭ ನೇ ಅಕ್ಟೋಬರ್ ೬ ರಂದು ತನ್ನ ಸರ್ವ ಕಾರ್ಯಕರ್ತರ ಸಭೆಯನ್ನು ನಡೆಸಿತು. ಸಭೆಯಲ್ಲಿ ಸತ್ಯಾಗ್ರಹವನ್ನು ಮುಂದುವರಿಸಲು ವಿದ್ಯಾರ್ಥಿ ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿಯು ನಿರ್ಣಯಿಸಿತು ಹಾಗೂ ಜಿಲ್ಲಾಧಿಕಾರಿಗಳು ಈಗಾಗಲೇ ಹೊರಡಿಸಿರುವ ತಡೆಯಾಜ್ಞೆಯನ್ನು ಉಲ್ಲಂಘಿಸಿತು. ಆ ಕಾರಣವಾಗಿಯೇ ವೀರಪ್ಪ, ವೀರಭದ್ರಪ್ಪ, ಸತ್ಯನಾರಾಯಣ ಶೆಟ್ಟಿ, ಬಿ.ಎನ್. ನಂಜುಂಡಯ್ಯ, ಸಿ.ಆರ್.ದಂಗೋಜಿರಾವ್ ಅವರನ್ನು ಪೊಲೀಸರು ದಸ್ತಗಿರಿ ಮಾಡಿ ಮೈಸೂರು ನಗರದ ದ್ವಿತೀಯ ನ್ಯಾಯಾಲಯದ ನ್ಯಾಯಾಧೀಶರ ಮುಂದೆ ಹಾಜರು ಪಡಿಸಿದರು. ನ್ಯಾಯಾಧೀಶರು ಇವರಿಗೆ ಎರಡು ತಿಂಗಳುಗಳ ಕಾಲ ಸದಾ ರಜೆಯನ್ನು ವಿಧಿಸಿದರು.

ಮೈಸೂರು ಸಂಸ್ಥಾನವೂ ಇನ್ನೂ ಸ್ವಾತಂತ್ರ್ಯಗೊಂಡಿಲ್ಲದ ಕಾರಣವಾಗಿಯೇ ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಅನೇಕ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಮುಷ್ಕರವನ್ನು ತಮ್ಮ ತಮ್ಮ ಸಾತ್ವಿಕ ನಿಟ್ಟಿನಿಂದಲೇ ಮಾಡುತ್ತಲೇ ಬಂದಿದ್ದರು. ಮುಂದುವರೆದು ೧೯೪೭ ನೇ ಅಕ್ಟೋಬರ್ ೦೭ ರಂದು ಮೈಸೂರು ನಗರದಲ್ಲಿ ಇದ್ದಂತಹ ಅಠಾರ ಕಚೇರಿಯ ಬಳಿ ಮೈಸೂರು ವಿಶ್ವವಿದ್ಯಾನಿಲಯದ ಅಂಗಸಂಸ್ಥೆಯ ಆಗಿರುವ ಮಹಾರಾಜ ಕಾಲೇಜಿನ ವಿದ್ಯಾರ್ಥಿಗಳು ಪಿಕೆಟಿಂಗ್ ಮಾಡುತ್ತಿದ್ದರು ಎಂದು ಪೊಲೀಸರು ಅನುಮಾನದಿಂದ ಹಲವು ವಿದ್ಯಾರ್ಥಿಗಳನ್ನು ದಸ್ತಗಿರಿ ಮಾಡಿದರು. ಅವರಲ್ಲಿ ವಿದ್ಯಾರ್ಥಿ ಕಾಂಗ್ರೆಸ್ ಸಮಿತಿಯ ನಾಯಕರಾಗಿದ್ದ ಜಿ.ಪಿ.ದಾಸೇಗೌಡ, ಕೆ.ಎಂ.ಪ್ರಸನ್ನಕುಮಾರ್, ಎನ್.ಆರ್.ನಾರಾಯಣ ಅವರುಗಳು ಪ್ರಮುಖರು. ಇವರನ್ನು ನಗರದಲ್ಲಿನ ಎರಡನೆಯ ನ್ಯಾಯಾಲಯದ ನ್ಯಾಯಾಧೀಶರ ಮುಂದೆ ಪೊಲೀಸರು ಹಾಜರುಪಡಿಸಿದಾಗ ಅವರಿಗೆ ನ್ಯಾಯಾಧೀಶರು ತಲಾ ಎರಡು ತಿಂಗಳುಗಳ ಕಾಲ ಸಜಾವನ್ನು ವಿಧಿಸಿದರು.



ಮೈಸೂರು ನಗರದಲ್ಲಿರುವ ನ್ಯಾಯಾಲಯಗಳ ಮುಂದೆ ಇದೇ ದಿನ ಕೆಲವು ಮಹಿಳೆಯರು ಹಾಗೂ ಹತ್ತು ಶಾಲಾ ಕಾಲೇಜುಗಳ ವಿದ್ಯಾರ್ಥಿ ಸಮೂಹವು ಪಿಕೆಟಿಂಗ್ ಮತ್ತು ಹರತಾಳವನ್ನು ನಡೆಸಿದರು. ಈ ಹರತಾಳ ಸತ್ಯಾಗ್ರಹದಲ್ಲಿ ನ್ಯಾಯಾಲಯದ ಮುಂದೆ ಹದಿನೈದು ಮಹಿಳೆಯರು ಹಾಗೂ ೫ ಮಂದಿ ವಿದ್ಯಾರ್ಥಿಗಳು ಪಿಕೆಟಿಂಗ್ ನಡೆಸುವ ಮೂಲಕ ನ್ಯಾಯಾಲಯಕ್ಕೆ ಬರುತ್ತಿದ್ದ ಬಾರ್ ಅಸೋಸಿಯೇಶನ್ ಸದಸ್ಯರನ್ನು ಸಹ ನ್ಯಾಯಾಲಯಗಳಿಗೆ ಹೋಗದಂತೆ ತಡೆದರು. ನಗರದ ಎರಡನೇ ಪೌರ ನ್ಯಾಯಾಲಯಗಳ ಮುಂದೆ ಮಹಿಳೆಯರು ನಿಂತು ಕಾರ್ಯ ನಿರ್ವಹಿಸಲು ಹೋಗುತ್ತಿದ್ದ ಪ್ರತಿಯೊಬ್ಬ ನ್ಯಾಯವಾದಿಗಳು ಮತ್ತು ಅವರ ಕಕ್ಷಿದಾರರನ್ನು ತಡೆದು ನ್ಯಾಯಾಲಯಕ್ಕೆ ಹೋಗ ಬಾರದು ತಾವು ಕೂಡ ಈ ಸತ್ಯಾಗ್ರಹಕ್ಕೆ ಬೆಂಬಲವನ್ನು ನೀಡಬೇಕು ಎಂದು ಪಿಕೆಟಿಂಗ್ ನಡೆಸುತ್ತಿದ್ದರು. ಜೊತೆಗೆ ವಿದ್ಯಾರ್ಥಿಗಳು ನ್ಯಾಯಾಲಯದ ಮುಖ್ಯ ದ್ವಾರದಲ್ಲಿ ನಿಂತು ಪಿಕೆಟಿಂಗ್ ಮಾಡುತ್ತಿದ್ದರು. ಇದರ ನಾಯಕತ್ವವನ್ನು ಶ್ರೀಮತಿ ಪ್ರಫುಲ್ಲಾ ಕೃಷ್ಣರಾವ್ ಅವರು ವಹಿಸಿದ್ದರು.

ಮೈಸೂರು ನಗರದಲ್ಲಿ ಸತ್ಯಾಗ್ರಹಿಗಳು ತಮ್ಮ ಸತ್ಯಾಗ್ರಹವನ್ನು ಮುಂದುವರಿಸುವ ಕಾರಣವಾಗಿಯೇ ವಿ.ಆರ್.ಕಾಳೇಶ್, ಎ.ಜೆ.ಬೋರ್ಕಾ, ಇ.ಎನ್.ನೀಲಕಂಠ ಹಾಗೂ ತಿರುವಂಕೂರಿನಿಂದ ಈ ಸತ್ಯಾಗ್ರಹಕ್ಕೆ ಬಂದಂತಹ ಎ.ಕೆ. ಡೇವಿಡ್ ಮಲಬಾರ್ ದಾಮೋದರ್ ಮತ್ತು ಎಂ.ಎಂ.ಕರಿಯಪ್ಪ ಎಂಬುವರಿಗೆ ಮೈಸೂರಿನ ಎರಡನೆಯ ನ್ಯಾಯಾಲಯದ ನ್ಯಾಯಾಧೀಶರು ಎರಡು ತಿಂಗಳುಗಳ ಕಾಲ ಸಜಾವನ್ನು ವಿಧಿಸಿದರು ಹಾಗೆಯೇ ೧೯೪೭ ನೇ ಅಕ್ಟೋಬರ್ ೯ ರಂದು ಮೈಸೂರು ನ್ಯಾಯಾಲಯದ ಮುಂದೆ ಮತ್ತೆ ಪಿಕೆಟಿಂಗ್‌ಅನ್ನು ಶ್ರೀಮತಿ ಪ್ರಫುಲ್ಲಾಕೃಷ್ಣ ಅಯ್ಯಂಗಾರ್, ಎಸ್.ಎಸ್. ನರಸಪ್ಪಪದ್ಮ,

ಸತ್ಯಭಾಮದೇವಿ ಮತ್ತು ಇತರೆ ೩೬ ಜನ ಮಹಿಳೆಯರು ಹಾಗೂ ೩೪ ಜನ ವಿದ್ಯಾರ್ಥಿಗಳು ಒಟ್ಟು ೭೦ ಜನರನ್ನು ಪೊಲೀಸರು ಬಂಧಿಸಿದ್ದರು.

ಮೈಸೂರು ನಗರದಲ್ಲಿನ ೧೦೦ ಅಡಿ ರಸ್ತೆಯ ೫ ದೀಪದ ಕಂಬದ ಬಳಿ ೧೯೪೭ ನೇ ಅಕ್ಟೋಬರ್ ೦೮ ರಂದು ಶಾಲಾ–ಕಾಲೇಜುಗಳ ನೂರಾರು ಬಾಲಕ ಹಾಗೂ ಬಾಲಕಿಯರು ಅರಮನೆಯ ಸತ್ಯಾಗ್ರಹದ ಕಾರಣವಾಗಿ ಸಭೆಯನ್ನು ಸೇರಿ ಚರ್ಚಿಸುತ್ತಿದ್ದರು. ಇದನ್ನು ತಿಳಿದ ಪೊಲೀಸರು ಸ್ಥಳಕ್ಕೆ ಆಗಮಿಸಿ ಗುಂಪನ್ನು ಚದುರಿಸಲು ಲಾಠಿ ಪ್ರಹಾರವನ್ನು ಮಾಡಿದರು. ಇದರಿಂದ ಅನೇಕ ವಿದ್ಯಾರ್ಥಿಗಳು ಗಾಯಗೊಂಡು ಆರೋಗ್ಯ ಕೇಂದ್ರಗಳಲ್ಲಿ ದಾಖಲಾಗಿದ್ದರು. ಈ ಕಾರಣವಾಗಿಯೇ ಕೆಲವು ವಿದ್ಯಾರ್ಥಿಗಳನ್ನು ದಸ್ತಗಿರಿ ಮಾಡಿದರು. ಇದೇ ಸಂದರ್ಭದಲ್ಲಿ ವಿದ್ಯಾರ್ಥಿಗಳು ಹಾಗೂ ಪೊಲೀಸರ ನಡುವೆ ಘರ್ಷಣೆ ನಡೆಯುವ ಮೂಲಕ ಪೊಲೀಸರ ಮೇಲೆ ಕಲ್ಲು ತೂರಾಟ ನಡೆಯಿತು. ಪೊಲೀಸರು ವಿದ್ಯಾರ್ಥಿಗಳ ಮೇಲೆ ಲಾಠಿ ಪ್ರಹಾರ ಮಾಡಿರುವುದು ದಾಖಲಾಗಿದೆ.

ಮೈಸೂರು ನಗರ ಪ್ರದೇಶದಲ್ಲಿರುವ ಹಾಗೂ ಸ್ವಾತಂತ್ರ್ಯ ಚಳುವಳಿಯ ಕೇಂದ್ರ ಸ್ಥಾನವೇ ಆಗಿರುವಂತಹ ಸುಬ್ಬರಾಯ್ಯನ ಕೆರೆಯ ಮೈದಾನದಲ್ಲಿ ೧೯೪೭ ನೇ ಅಕ್ಟೋಬರ್ ೧೦ ರಂದು ರಾಷ್ಟ್ರದ ತ್ರಿವರ್ಣ ಧ್ವಜಾರೋಹಣ ಕಾರ್ಯಕ್ರಮವನ್ನು ಮೈಸೂರು ಪ್ರಾಂತ್ಯ ಕಾಂಗ್ರೆಸ್ ಸಮಿತಿ ಮತ್ತು ವಿದ್ಯಾರ್ಥಿ ಕಾಂಗ್ರೆಸ್ ಸಮಿತಿಗಳಿಂದ ಹಮ್ಮಿಕೊಳ್ಳಲಾಗಿತ್ತು. ಈ ಮಹತ್ವದ ಕಾರ್ಯಕ್ರಮದಲ್ಲಿ ನಗರದಲ್ಲಿನ ಅನೇಕ ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳು ಕೂಡ ಸಕ್ರಿಯವಾಗಿ ಭಾಗವಹಿಸಿ ಪಥ ಸಂಚಲನವನ್ನು ನಡೆಸಿ ನಮ್ಮ ತ್ರಿವರ್ಣ ರಾಷ್ಟ್ರಧ್ವಜಕ್ಕೆ ಗೌರವ ಸಮರ್ಪಿಸಿದ್ದರು. ಈ ಧ್ವಜಾರೋಹಣದ ಸಂದರ್ಭದಲ್ಲಿ ರಾಷ್ಟ್ರಗೀತೆಯನ್ನು ಹಾಡಿದರು. ಅದು ಇಡೀ ಮೈಸೂರು ನಗರದಲ್ಲಿಯೇ ಮೊಳಗಿತು. ಈ ರಾಷ್ಟ್ರಗೀತೆಯ ಘರ್ಜನೆ ಪ್ರತಿಯೊಬ್ಬರನ್ನು ಬಡಿದೆಬ್ಬಿರಿಸಿತು. ಇದೇ ದಿನ ಮೈಸೂರು ಅರಮನೆಯ ಮುಂದೆ ನಡೆಯುತ್ತಿದ್ದಂತಹ ಸತ್ಯಾಗ್ರಹಕ್ಕೆ ತಲಚೇರಿಯಿಂದಲೂ ಕೂಡ ೧೨ ನಿವೃತ್ತ ಸೈನಿಕರು ಬಂದು ಕೂಡಿ ಕೊಂಡಿದ್ದರು.

ಮೈಸೂರು ಸಂಸ್ಥಾನದ ಮಹಾರಾಜರು ನೀಡಿದ ಘೋಷಣೆಯು



ತೃಪ್ತಿಯನ್ನು ತರಲಾರದೆ ಸತ್ಯಾಗ್ರಹವನ್ನು ಮುಂದುವರಿಸಲಾಗುವುದು ಎಂದು ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಪುರಸಭೆಯ ಸದಸ್ಯರು ಕೂಡ ಆಗಿದ್ದ ಚೌಡಯ್ಯ ಅವರು ಸತ್ಯಾಗ್ರಹದಲ್ಲಿ ಭಾಗವಹಿಸಿದ್ದಂತಹ ಸಮಸ್ತ ಕಾರ್ಯಕರ್ತರಿಗೆ ಕರೆ ನೀಡಿದರು.

ಮೈಸೂರು ಸಂಸ್ಥಾನದಲ್ಲಿನ ಅರಮನೆಯ ಮುಂದೆ ನಡೆಯುತ್ತಿದ್ದ ಸತ್ಯಾಗ್ರಹದಲ್ಲಿ ಭಾಗವಹಿಸುತ್ತಿದ್ದಂತಹ ಸತ್ಯಾಗ್ರಹಿಗಳನ್ನು ದಸ್ತಗಿರಿ ಮಾಡುತ್ತಿದ್ದ ಪೊಲೀಸರ ದೌರ್ಜನ್ಯ ಮತ್ತು ಧೋರಣೆಗಳನ್ನು ಕಾಂಗ್ರೆಸ್ ಸಮಿತಿಯ ಸ್ವಾತಂತ್ರ್ಯ ಚಳುವಳಿಯ ಸೇನಾನಿಗಳು ಪ್ರಖರವಾಗಿಯೇ ಖಂಡಿಸಿದ್ದರು. ಇದರ ಒಂದು ಭಾಗವಾಗಿಯೇ ೧೯೪೭ ನೇ ಅಕ್ಟೋಬರ್ ೧೧ ರಂದು ಅದೇ ಸುಬ್ಬರಾಯನ ಕೆರೆಯ ಮೈದಾನದಲ್ಲಿ ಮಹಾತ್ಮಾ ಗಾಂಧೀಜಿ ಅವರ ಜಯಂತಿಯ ಅಂಗವಾಗಿ ಬಹಿರಂಗ ಸಭೆಯನ್ನು ಚೌಡಯ್ಯ ಅವರು ನಡೆಸಿದರು.

ಗೌರವಾನಿತ್ವ ನ್ಯಾಯಾಲಯವು ಪೊಲೀಸ್ ಅಧಿಕಾರಿಗಳನ್ನು ವಿಚಾರಣೆಗೆ ಗುರಿಪಡಿಸಬೇಕು ಎಂಬ ಹೇಳಿಕೆಯನ್ನು ನೀಡಿತು. ಏಕೆಂದರೆ ಮೈಸೂರು ಸತ್ಯಾಗ್ರಹದಲ್ಲಿ ಭಾಗವಹಿಸಿರುವ ಪ್ರತಿಯೊಬ್ಬ ಸತ್ಯಾಗ್ರಹಿಗಳು ಹಾಗೂ ವಿದ್ಯಾರ್ಥಿಗಳು ಜವಾಬ್ದಾರಿಯುತ ಸರ್ಕಾರವನ್ನು ಪಡೆಯುವ ಸಲುವಾಗಿ ಶಾಂತಿಯುತ, ಅಹಿಂಸಾತ್ಮಕವಾದ ಹಾಗೂ ಪ್ರಜಾಸತ್ತಾತ್ಮಕವಾದ ಹೋರಾಟವನ್ನು ಮಾಡುತ್ತಲೇ ಬರಲಾಗಿದೆ, ಆದರೂ ಕೂಡ ನಿರಾಪರಾಧಿಗಳಾದಂತಹ ಸತ್ಯಾಗ್ರಹಿಗಳ ಬಗ್ಗೆ ಸರ್ಕಾರದವರೂ ಹಾಗೂ ಪೊಲೀಸರು ಅನುಸರಿಸುತ್ತಿರುವ ವರ್ತನೆಯಂತೂ ಅಮಾನವೀಯವಾಗಿದೆ, ಅನೇಕ ನಿರಾಪರಾಧಿ ಸತ್ಯಾಗ್ರಹಿಗಳು, ವಿದ್ಯಾರ್ಥಿಗಳು ಲಾಠಿ ಏಟಿನ ಹಾಗೂ ಗೋಲಿಬಾರ್‌ನಿಂದಾಗಿಯೇ ಜೀವನವನ್ನು ಕಳೆದು ಕೊಂಡಿದ್ದಾರೆ, ಹಲವು ಮಾರಾಣಾಂತಿಕ ಹಲ್ಲೆಗೂ ಕೂಡ ಒಳಗಾಗಿದ್ದಾರೆ, ಹಲವರು ಇದರಿಂದ ಘಾಸಿಗೊಂಡಿದ್ದಾರೆ, ಇದರ ವಿರುದ್ಧ ಇಂದಲ್ಲ ನಾಳೆ ಅವರು ತಮ್ಮ ನ್ಯಾಯಕ್ಕಾಗಿ ನ್ಯಾಯಾಲಯದ ಮೊರೆ ಹೋಗುತ್ತಾರೆ ಆದ್ದರಿಂದ ಪೊಲೀಸ್ ಅಧಿಕಾರಿಗಳು ಕಡ್ಡಾಯವಾಗಿ ವಿಚಾರಣೆಗಳಿಗೆ ಹಾಜರಾಗಲೇಬೇಕು ಎಂದು ಭಾಷಣವನ್ನು ಮಾಡುವ ಮೂಲಕ ಸಭಿಕರಿಗೆ ಧೈರ್ಯವನ್ನು ತುಂಬಿದರು. ಈ ಸಭೆಯಲ್ಲಿ ಕಾಂಗ್ರೆಸ್ ಸಮಿತಿಯ ಮುಖಂಡರಾದ ರಾಮಸ್ವಾಮಿ, ನ್ಯಾಯವಾದಿಗಳಾಗಿದ್ದ ಸೂರ್ಯನಾರಾಯಣ ರಾವ್ ಹಾಗೂ ಇತರೆ ಅನೇಕ ಪ್ರಮುಖರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮೈಸೂರು ರಾಜ್ಯದಲ್ಲಿ ಜವಾಬ್ದಾರಿ ಸರ್ಕಾರದ ರಚನೆಯ ನಾಯಕತ್ವವನ್ನು ವಹಿಸಿದ್ದಂತಹ ಹಾಗೂ ಪ್ರಾಂತ್ಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಕೆ.ಸಿ ರೆಡ್ಡಿ ಅವರು ೧೯೪೭ ನೇ ಅಕ್ಟೋಬರ್ ೧೩ ರಂದು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಪೊಲೀಸರ ಗೋಲಿಬಾರಿನ ಗುಂಡೇಟಿಗೆ ಬಲಿಯಾಗಿರುವ ಹುತಾತ್ಮ ವಿದ್ಯಾರ್ಥಿ ರಾಮಸ್ವಾಮಿ ಅವರ ಮನೆಗೆ ಭೇಟಿ ನೀಡಿ, ಅವರ ತಂದೆ–ತಾಯಂದಿರಿಗೆ ಸಾಂತ್ವನವನ್ನೂ ಹೇಳಿದರು. ಹಾಗೆಯೇ ರಾಮಸ್ವಾಮಿ ಸ್ಮಾರಕ ರಚನೆಗೆ ಸರ್ಕಾರದ ಹಾಗೂ ಮಹಾರಾಜರ ಉದಾರವಾದ ಸಹಕಾರವನ್ನು ಕೋರಲಾಗಿದೆ ಎಂದು ತಿಳಿಸಿದರು ಹಾಗೂ ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಅನೇಕರು ಹುತಾತ್ಮರಾಗಿರುವ ಹಾಗೂ ಪೊಲೀಸರ ಲಾಠಿ ಏಟಿನ ದೌರ್ಜನ್ಯದಿಂದಲೇ ಗಾಯಗೊಂಡಿರುವ ಸತ್ಯಾಗ್ರಹಿಗಳ ಮನೆಗಳಿಗೆ ಭೇಟಿಯನ್ನು ನೀಡಿ ಸಾಂತ್ವನವನ್ನು ಹೇಳಿ ಮುಂದಿನ ದಿನಗಳಲ್ಲಿ ಸರ್ಕಾರವು ಅವರ ನೆರವಿಗೆ ಧಾವಿಸುತ್ತದೆ ಎಂದು ಹೇಳಿದರು.

ಇದೇ ದಿವಸ ಮೈಸೂರು ನಗರದ ಸ್ವಾತಂತ್ರ್ಯ ಚಳವಳಿ ಹಾಗೂ ಸತ್ಯಾಗ್ರಹಿಗಳ ಕೇಂದ್ರ ಸ್ಥಳವೆಂದೇ ಹೆಸರುಗಳಿಸಿರುವ ಸುಬ್ಬರಾಯನ ಕೆರೆಯ ಮೈದಾನದಲ್ಲಿ ವಿದ್ಯಾರ್ಥಿ ಕಾಂಗ್ರೆಸ್ ಸಮಿತಿಯು ಒಂದು ಬಹಿರಂಗ ಸಭೆಯನ್ನು ಆಯೋಜಿಸಿತ್ತು. ಈ ಸಮಿತಿಯ ಸಭೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿನ ಮಹಾರಾಜ ಕಾಲೇಜಿನಲ್ಲಿ ಹೆಸರಾಂತ ಅಧ್ಯಾಪಾಕರಾಗಿದ್ದಂತಹ ಎಂ.ವಿ. ರಾಜಗೋಪಾಲ್ ಅವರು ಈ ಸಭೆಯಲ್ಲಿ ಅಧ್ಯಕ್ಷತೆಯನ್ನು ವಹಿಸಿ, ಇವರು ಸಭೆಯಲ್ಲಿ ಕಾಂಗ್ರೆಸ್ ರಚಿಸುವ ಜವಾಬ್ದಾರಿ ಸರ್ಕಾರದಲ್ಲಿನ ಸಚಿವರ ಕರ್ತವ್ಯಗಳನ್ನು ವಿವರಿಸಿದ್ದರು. ಅವರ ಕರ್ತವ್ಯ ನಿರ್ವಹಣೆಗೆ ಪ್ರತಿಯೊಬ್ಬರೂ ಕೂಡ ಬೆಂಬಲವನ್ನು ನೀಡ ಬೇಕೆಂದು ಸಲಹೆಯನ್ನು ನೀಡಿದರು. ಹಾಗೆಯೇ ಸ್ವತಃ ಎಂ.ವಿ. ರಾಜಗೋಪಾಲ್ ಅವರು ಎಸ್.ನಿಜಲಿಂಗಪ್ಪ ಅವರ ಸೂಚನೆಯಂತೆ ಮದ್ರಾಸಿನ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯ ಪ್ರತಿನಿಧಿಯಾಗಿ ಸಂಸ್ಥಾನದ ಮೂಲೆ ಮೂಲೆಗಳಿಗೂ ಸಂಚರಿಸಿ, ಅಲ್ಲಿ ನಡೆಯುತ್ತಿದ್ದಂತಹ ದಬ್ಬಾಳಿಕೆಗಳು ಹಾಗೂ ದೌರ್ಜನ್ಯಗಳನ್ನು ಕೂಲಂಕುಶವಾಗಿಯೇ ಪರಿಶೀಲಿಸಿರುವುದನ್ನು ಸಭೆಯ ಗಮನಕ್ಕೆ ತಂದರು. ಇದು ಮೈಸೂರು ವಿದ್ಯಾರ್ಥಿ ಕಾಂಗ್ರೆಸ್ ಸಮಿತಿಗೆ ಪ್ರೇರಕ ಶಕ್ತಿಯಾಗಿತ್ತು. ಏಕೆಂದರೆ ತರಗತಿಯಲ್ಲಿ ಪಾಠವನ್ನು ಹೇಳಿ ಕೊಡುತ್ತಿದ್ದ ಅಧ್ಯಾಪಕರು ಬಹಿರಂಗವಾಗಿ ಸ್ವಾತಂತ್ರ್ಯ ಚಳವಳಿ ಮತ್ತು



ಅದರಿಂದ ಉಂಟಾಗುವ ಲಾಭವನ್ನು ಹೇಳಿದಾಗ ವಿದ್ಯಾರ್ಥಿ ವರ್ಗದಲ್ಲಿ ಮತ್ತಷ್ಟು ಉತ್ಸಾಹ ಹೆಚ್ಚಿ ಅದರಿಂದ ಚಳವಳಿ ಹೊಸ ದಿಕ್ಕಿಗೆ ಚಲಿಸಲು ಸಾಧ್ಯವಾಯಿತು.

ವಿದ್ಯಾರ್ಥಿಗಳಲ್ಲಿ ಪ್ರಧಾನವಾಗಿ ಬದ್ಧತೆ, ಪ್ರಾಮಾಣಿಕತೆ, ಶಿಸ್ತು, ಸಂಯಮ ವ್ಯಕ್ತಿಗತವಾದ ಹಾಗೂ ಸ್ವಾಭಿಮಾನವನ್ನು ಅಂತರಗತವಾಗಿ ಪಡೆದುಕೊಳ್ಳಲು ಮತ್ತು ಪ್ರತಿ ಸಭೆಗಳಲ್ಲಿ ಬುದ್ಧಿಜೀವಿಗಳು ಹಾಗೂ ಪ್ರಧಾನ ಸೇನಾನಿಗಳು ಬೋಧಿಸುತ್ತಲೇ ಬಂದಿದ್ದರು, ಮತ್ತೇ ಈ ಬಹಿರಂಗ ಸಭೆಗೆ ಚಾಮರಾಜನಗರದ ಕಾಂಗ್ರೆಸ್ಸಿನ ಮುಖಂಡರಾದಂತಹ ಸಿ.ಗೋಪಾಲರಾಯರು ಮತ್ತು ವಿದ್ಯಾರ್ಥಿ ನಾಯಕರಾದ ಪುಟ್ಟೂರಾಯ ಅವರು ಆಗಮಿಸಿದ್ದರು.

ಮೈಸೂರು ನಗರದಲ್ಲಿನ ಸ್ವಾತಂತ್ರ್ಯ ಹೋರಾಟ ಹಾಗೂ ಸತ್ಯಾಗ್ರಹಿಗಳ ಕೇಂದ್ರ ಸ್ಥಳವೆಂದೇ ಖ್ಯಾತಿಗೊಂಡಿರುವಂತಹ ಸುಬ್ಬರಾಯನ ಕೆರೆಯ ಮೈದಾನದಲ್ಲಿ ೧೯೪೭ ನೇ ಅಕ್ಟೋಬರ್ ೧೭ ರಂದು ನೇತಾಜಿ ಸಂಘದ ಆಶ್ರಯದಲ್ಲಿ ವಿದ್ಯಾರ್ಥಿಗಳಿಗೆ ಮಾನ್ಯತೆ ನೀಡಬೇಕು ಎಂದು ಬಹಿರಂಗ ಸಭೆಯಲ್ಲಿ ತೀರ್ಮಾನವಾಯಿತು. ಈ ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಜಿ.ಎನ್.ನಾರಾಯಣ್ ಅವರು ವಹಿಸಿದ್ದರು ಹಾಗೆಯೇ ಎಂ.ಎನ್. ಜೋಯಿಸ್, ಅಗರಂ ರಂಗಯ್ಯ ಹಾಗೂ ಕೆ.ಎಸ್.ಜಯರಾಮ ಅವರುಗಳು ಭಾಗವಹಿಸಿ ವಿದ್ಯಾರ್ಥಿಗಳ ಮೇಲಿನ ಎಲ್ಲಾ ಪ್ರಕರಣಗಳಿಂದ ಮುಕ್ತವಾಗಿಸ ಬೇಕು, ಅವರ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿ ಕೊಡಬೇಕೆಂದು ಒತ್ತಾಹಿಸಿದ್ದರು. ಈ ಸಭೆಯಲ್ಲಿ ಭಾಗವಹಿಸಿದ್ದ ಕಾಂಗ್ರೆಸ್ಸಿನ ನಾಯಕರು ಹಾಗೂ ವಿದ್ಯಾರ್ಥಿ ಕಾಂಗ್ರೆಸ್ ಸಮಿತಿಯ ಮುಖಂಡರಿಬ್ಬರಿಗೂ ನಿರಾಪರಾಧಿ ಸತ್ಯಾಗ್ರಹಿಗಳ ಮೇಲೆ ಪೊಲೀಸರು ಅಮಾನವೀಯ ದೌರ್ಜನ್ಯವನ್ನು ನಡೆಸಿದರು. ಇದರ ಬಗೆಗೆ ನಿಷ್ಪಕ್ಷಪಾತವಾದ ವಿಚಾರಣೆಗಳನ್ನು ನಡೆಸಬೇಕು, ಕಾನೂನಿನ ಪ್ರಕಾರ ಕೃತ್ಯವೆಸಗಿರುವವರ ಮೇಲೆ ಕಠಿಣ ಕ್ರಮವನ್ನು ಕೈಗೊಳ್ಳಬೇಕು. ಇದರ ಜೊತೆಗೆ ಹಲವು ದಿನಗಳಿಂದ ಸೆರೆಮನೆಯಲ್ಲಿರುವ ಕಮ್ಯುನಿಸ್ಟ್ ನಾಯಕರಾಗಿರುವ ರಾಮನಾಥನ್ ಮತ್ತು ಕರ್ಪೂರ್ ವೆಂಟರಾಯರುಗಳನ್ನು ಕೂಡಲೇ ಬಿಡುಗಡೆ ಮಾಡಬೇಕು, ಇಲ್ಲವಾದರೆ ಕಾರಾಗೃಹದ ಮುಂದೆಯೇ ಸತ್ಯಾಗ್ರಹವನ್ನು ಹೂಡ ಬೇಕಾಗುತ್ತದೆ ಎಂದು ಸಭೆಯಲ್ಲಿ ಮಾತಾಡಿದರು.

ಮೈಸೂರು ರಾಜ್ಯದಲ್ಲಿ ನಡೆದಿರುವ ರಾಜಕೀಯ ಬೆಳವಣಿಗೆ ಭಾರತದ ಸ್ವಾತಂತ್ರ್ಯ ಸಂಗ್ರಾಮದ ಪ್ರಧಾನ ಸೇನಾನಿಯಾಗಿರುವ ಮಹಾತ್ಮಾ ಗಾಂಧೀಜಿ ಅವರು ೧೯೪೭ ನೇ ಅಕ್ಟೋಬರ್ ೧೭ ರಂದು ಬಿರ್ಲಾ ಭವನದಲ್ಲಿನ ಪ್ರಾರ್ಥನಾ ಸಭೆಯಲ್ಲಿ ಮೈಸೂರು ಮಹಾರಾಜ ಹಾಗೂ ಮೈಸೂರು ಕಾಂಗ್ರೆಸ್ ನಾಯಕರಿಗೆ ಅಭಿನಂದನೆಯನ್ನು ಸಲ್ಲಿಸಿದ್ದರು.

ವಿದ್ಯಾರ್ಥಿ ನಾಯಕರಾದ ಮೈಸೂರಿನ ಎಂ.ಎನ್.ಜೋಯಿಸ್ ಅವರು ರಾಜ್ಯದಲ್ಲಿ ವಿದ್ಯಾರ್ಥಿಗಳಿಗೆ ವಿಧಿಸಿರುವ ಶುಲ್ಕದಲ್ಲಿ ೨ ತಿಂಗಳ ಶುಲ್ಕವನ್ನು ಮಾಫಿ ಮಾಡಬೇಕು. ಈಗಾಗಲೇ ಪೊಲೀಸರ ಗುಂಡೇಟಿಗೆ ಬಲಿಯಾಗಿರುವ ವಿದ್ಯಾರ್ಥಿ ವೀರ ರಾಮಸ್ವಾಮಿ ಅವರ ಜ್ಞಾಪಕಾರ್ಥವಾಗಿ ಉಚಿತ ಸ್ಮಾರಕವನ್ನು ಸ್ಥಾಪಿಸಬೇಕು ಎಂದು ತಿಳಿಸಿದ್ದರು. ಇದೇ ಸಭೆಯಲ್ಲಿ ಭಾಗವಹಿಸಿದ್ದಂತಹ ಕೆ.ಎಸ್. ಜಯರಾಮ್ ಅವರು ಸ್ವಾತಂತ್ರ್ಯ ಮೈಸೂರು ರಾಜ್ಯದಲ್ಲಿ ರಚಿತವಾಗಲಿರುವ ಸರ್ಕಾರದಲ್ಲಿನ ಕಾಂಗ್ರೆಸ್ ಮಂತ್ರಿಮಂಡಲವು ದಕ್ಷತೆಯಿಂದ ವರ್ತಿಸುವ ಮುಖೇನ ಪ್ರಜಾನೀತಿಯನ್ನು ಹೆಚ್ಚಿನ ರೀತಿಯಲ್ಲಿ ಗಳಿಸಬೇಕು. ಸಭೆಯಲ್ಲಿ ಭಾಗವಹಿಸಿದ್ದಂತಹ ಸಾಧ್ವಿ ಪತ್ರಿಕೆಯ ಸಂಪಾದಕರು ಹಾಗೂ ಸತ್ಯಾಗ್ರಹದ ನಾಯಕರೂ ಆಗಿದ್ದಂತಹ ಅಗರಂ ರಂಗಯ್ಯ ಅವರು ಮಾತಾನಾಡುತ್ತಾ, ಸರ್ ಆರ್ಕಾಟ್ ಮತ್ತು ಸರ್ ತುಂಬುಚೆಟ್ಟಿ ಅವರಿಂದ ಈಗಾಗಲೇ ನಿರ್ಮಿತವಾಗಿರುವ ಕಲ್ಮಷ ವಾತಾವರಣವನ್ನು ಅವರಿಂದಲೇ ಶುದ್ಧೀಕರಣಗೊಳಿಸುವ ಸಲುವಾಗಿ ಅವರುಗಳನ್ನು ಅಧಿಕಾರದಲ್ಲಿ ಇಡಲಾಗಿದೆ. ಆದರೆ ಇದುವರೆಗೆ ಅರಮನೆಯಲ್ಲಿ ಮಹಾನವಮಿಯ ದಿನದಂದು ನಡಯುತ್ತಿದ್ದ ಆಂಗ್ಲ ಮಾದರಿಯ ದರ್ಬಾರನ್ನು ಗೌರವಾನಿತ್ವ ಮಹಾರಾಜರು ರದ್ದುಗೊಳಿಸಬೇಕು. ಆ ದಿನದಂದು ಮಹಾತ್ಮಾ ಗಾಂಧೀಜಿ ಅವರ ಟೋಪಿಯಿಂದ ಕೂಡಿದ ನಮ್ಮ ನಾಯಕರುಗಳು ದರ್ಬಾರನ್ನು ನಡಸ ಬೇಕೆಂದು ಪ್ರತಿಪಾದಿಸಿದರು. ಮತ್ತೇ ಪೊಲೀಸ್ ದೌರ್ಜನ್ಯ ಹಾಗೂ ದಬ್ಬಾಳಿಕೆಗಳ ಬಗೆಗೆ ನಿಷ್ಪಕ್ಷಪಾತವಾದ ವಿಚಾರಣೆಯೂ ಕೂಡ ನಡೆಯಬೇಕು ಎಂದು ಸಭೆಯ ಗಮನಕ್ಕೆ ತಂದರು.

ಮೈಸೂರು ಮಹಾ ನಗರದಲ್ಲಿ ೧೯೪೭ ನೇ ಅಕ್ಟೋಬರ್ ೧೮ ರಂದು ಸುಬ್ಬರಾಯನ ಕೆರೆಯ ಮೈದಾನದಲ್ಲಿ ವಿದ್ಯಾರ್ಥಿಗಳು ಹಾಗೂ ಸ್ವಾತಂತ್ರ್ಯ ಚಳುವಳಿಯ ಸರ್ವ ಕಾರ್ಯಕರ್ತರು ಒಂದು ಬೃಹತ್ ಬಹಿರಂಗ ಸಭೆಯನ್ನು ಕರೆದಿದ್ದರು. ಈ ಸಭೆಯಲ್ಲಿ ಮುಖಂಡರಾದ ಎಂ.ಎನ್. ಜೋಯಿಸ್ ಅವರು ಅಧ್ಯಕ್ಷತೆ ವಹಿಸಿದ್ದರು. ಇವರೊಟ್ಟಿಗೆ ಅಗರಂರಂಗಯ್ಯ, ಸೂರ್ಯ ನಾರಾಯಾಣ ಪಂಡಿತರು ಮತ್ತು ಪೌರವಾಣಿ ಪತ್ರಿಕೆಯ ಸಂಪಾದಕರಾದಂತಹ ಎಚ್.ಎಸ್.ದೊರೆಸ್ವಾಮಿ ಅವರು ಕೂಡ ಭಾಗವಹಿಸಿ ಮಾತಾನಾಡಿದರು. ಇವರೆಲ್ಲರ ಪ್ರಕರತೆಯ ಭಾಷಣವು ಪ್ರಧಾನವಾಗಿ ಈಗಾಗಲೇ ಹಲವು ದಿನಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಸಂಗ್ರಾಮ, ಮೈಸೂರು ಚಲೋ ಚಳುವಳಿ ಹಾಗೂ ಪ್ರಮುಖವಾಗಿ ಹಾರ್ಡ್ವಿಕ್ ಶಾಲೆಯ ವಿದ್ಯಾರ್ಥಿ ರಾಮಸ್ವಾಮಿ ಅವರು ಗೋಲಿಬಾರ್ ಹತ್ಯೆಗೆ ಗುರಿಯಾಗಿರುವ ಪ್ರಕರಣವನ್ನು ಕೇಂದ್ರಿಕರಿಸಿ ನಡೆದಿರುವ ಸತ್ಯಾಗ್ರಹಿಗಳಲ್ಲಿ ಭಾಗವಹಿಸಿದ್ದಂತಹ ಸತ್ಯಾಗ್ರಹಿಗಳನ್ನು ಬಂಧಿಸಿ ಸೆರೆಮನೆಯಲ್ಲಿ ಹಾಕಲಾಗಿತ್ತು. ಅವರನ್ನು ಕೂಡಲೇ ಬಂಧನ ಮುಕ್ತಗೊಳಿಸಬೇಕು ಎಂಬುದು ವಿದ್ಯಾರ್ಥಿ ಕಾಂಗ್ರೆಸ್ಸು ಹಾಗೂ ರಾಷ್ಟ್ರೀಯ ಕಾಂಗ್ರೆಸ್ಸಿನ ಚಳುವಳಿಯ ಹಾಗೂ ಮುಷ್ಕರದ ಪ್ರಧಾನ ಉದ್ದೇಶವೇ ಆಗಿತ್ತು.



ಬೆಂಗಳೂರು ದಂಡಿನಲ್ಲೂ ಕಾರ್ಮಿಕರು, ವಿದ್ಯಾರ್ಥಿಗಳು ಮೆರವಣಿಗೆ ನಡೆಸಿ ಸಂಪೂರ್ಣ ಹರತಾಳ ಆಚರಿಸಿದರು. ಮೈಸೂರು ನಗರದಲ್ಲಿ ಶಾಂತಿಯುತ ಹರತಾಳ ಯಶಸ್ವಿಯಾಗಿ ನಡೆಯಿತು. ಶಾಲಾ ಕಾಲೇಜು ವಿದ್ಯಾರ್ಥಿಗಳ ಬಹಿರಂಗ ಸಭೆ ನಡೆಯಿತು. ಕಾಂಗ್ರೆಸ್ಸಿನ ಈ ಹೋರಾಟಕ್ಕೆ ವಿದ್ಯಾರ್ಥಿಗಳು ಸಂಪೂರ್ಣ ಬೆಂಬಲ ಕೊಡ ಬೇಕೆಂದು ನಿರ್ಣಯ ಮಾಡಲಾಯಿತು. ಸುಬ್ಬರಾಯನ ಕೆರೆಯ ಮೈದಾನದಲ್ಲಿ ಎಸ್. ಚನ್ನಯ್ಯ ಅವರು ಬೆಳಗ್ಗೆ ಧ್ವಜವಂದನೆ ನಡೆಸಿದರು. ಎಲ್ಲ ಅಂಗಡಿಗಳೂ ಮುಚ್ಚಿದವಾದರೂ, ಹಳೇ ಅಗ್ರಹಾರದ ನಂಜುಂಡಪ್ಪ ಅಂಡ್ ಸನ್ಸ್ ಮತ್ತು ಕೆಲವು ಮುಸಲ್ಮಾನರ ಅಂಗಡಿಗಳು ಮಾತ್ರ ಮುಚ್ಚಿರಲಿಲ್ಲ.

ಮೈಸೂರು ಚಲೋ ಚಳುವಳಿಯೂ ಒಂದು ನಿರ್ಣಾಯಕ ಹಂತವನ್ನು ತಲುಪಿತ್ತು. ಆದ್ದರಿಂದಲೇ ಮೈಸೂರು ಸಂಸ್ಥಾನದ ಎಲ್ಲಾ ವರ್ಗದವರೆಲ್ಲಾ ಒಗ್ಗೂಡಿ ಮಾಡಿದ ಅರಮನೆಯ ಸತ್ಯಾಗ್ರಹವನ್ನು ಸರ್ಕಾರವು ಮಟ್ಟ ಹಾಕಲು ಕಾರ್ಯತಂತ್ರಗಳನ್ನು ರೂಪಿಸಿತ್ತು. ಆದರೆ ಅವರು ರೂಪಿಸಿದ್ದ ಎಲ್ಲಾ ಕಾರ್ಯತಂತ್ರಗಳನ್ನು ಸಂಸ್ಥಾನದ ವಿದ್ಯಾರ್ಥಿಗಳು, ಕಾರ್ಮಿಕರು, ರೈತರು, ಅಂತಿಮವಾಗಿ ದೌರ್ಜನ್ಯ ಮಾಡುತ್ತಿದಂತಹ ಪೊಲೀಸರು ಸಹ ಸೇರಿ ಕೊಂಡು ಚಳುವಳಿಗೆ ಸಹಕರಿಸಿದ್ದರು.

ಹೀಗೆ ಎಲ್ಲೆಡೆ ಸತ್ಯಾಗ್ರಹ ಭೀಕರತೆಯ ಕಾವು ತಟ್ಟಿದ ಮೇಲೆ ಮೈಸೂರಿನ

ಮಹಾರಾಜರು ತಮ್ಮ ಅಧಿಕಾರವನ್ನು ಜನತೆಗೆ ವರ್ಗಾಯಿಸಲು ನಿರ್ಧರಿಸಿದರು. ದೇಶದ ನಾಯಕರು ಸಹ ಮೈಸೂರಿನ ರಾಜರಿಗೆ ವಿವೇಕದ ಪತ್ರಗಳನ್ನು ಬರೆದರು. ಅಂತಿಮವಾಗಿ ೧೯೪೭ ನೇ ಅಕ್ಟೋಬರ್ ೨೪ ರಂದು ಮಹಾರಾಜರು ಘೋಷಣೆಯೊಂದನ್ನು ಹೊರಡಿಸಿ ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರದ ಸ್ಥಾಪನೆಗೆ ಮುಂದಾದರು. ಜೈಲಿನಲ್ಲಿದ್ದ ನಾಯಕರೊಡನೆ ಸಂಧಾನಗಳಾದವು. ರಾಜಕೀಯ ಖೈದಿಗಳ ಬಿಡುಗಡೆ, ಪತ್ರಿಕೆಗಳ ಮೇಲಿನ ನಿರ್ಬಂಧಗಳನ್ನು ತೆಗೆಯಲಾಯಿತು. ಮೈಸೂರಿನ ಜನತೆ ಪ್ರಭುತ್ವ ದಾಸ್ಯದಿಂದ ವಿಮೋಚನೆಯಾಗುವ ದಿನ ಬಂದೇ ಬಿಟ್ಟಿತು.

ಮೈಸೂರು ಪ್ರಾಂತ್ಯ ಕಾಂಗ್ರೆಸ್‌ನ ಅಧ್ಯಕ್ಷರು ಮತ್ತು ಪ್ರಜಾತಂತ್ರದ ಮುಖಂಡ ಕೆ.ಸಿ.ರೆಡ್ಡಿ ಅವರಿಗೂ ಹಾಗೂ ರಾಜತಂತ್ರದ ಮಹಾರಾಜರ ಸರ್ಕಾರಕ್ಕೂ ಒಂದು ಒಪ್ಪಂದವಾಯಿತು. ಆ ಒಪ್ಪಂದದ ಪ್ರಕಾರ ಚುನಾಯಿತ ಪ್ರತಿನಿಧಿಗಳು ರಾಜ್ಯಾಂಗವನ್ನು ರಚಿಸತಕ್ಕದ್ದು ಎಂಬ ಅಂಶವು ಅಡಕವಾಗಿತ್ತು, ಅಲ್ಲಿಯವರೆಗೆ ಮಾನ್ಯ ಕೆ.ಸಿ.ರೆಡ್ಡಿ ಅವರು ಮುಖ್ಯಮಂತ್ರಿಗಳಾಗಿ ಮೈಸೂರು ರಾಜ್ಯ ಸರ್ಕಾರದ ಅಧಿಕಾರವನ್ನು ಚಲಾಯಿಸ ತಕ್ಕದೆಂದು ತೀರ್ಮಾನಿಸಲಾಯಿತು. ಮೈಸೂರಿನ ಪ್ರಖ್ಯಾತ ಸುಬ್ಬರಾಯನ ಕೆರೆಯ ಮೈದಾನದಲ್ಲಿ ನಡೆದ ಬೃಹತ್ ಸಭೆಗೆ ಕೆ.ಸಿ.ರೆಡ್ಡಿ ಅವರನ್ನು ಜೀಪಿನಲ್ಲಿ ಕರೆ ತರಲಾಯಿತು. ಆ ಬೃಹತ್ ಸಭೆಯಲ್ಲಿ ಉತ್ಸಾಹವೋ ಉತ್ಸಾಹ, ಘೋಷಣೆಗಳು ಆಕಾಶಕ್ಕೂ ಮುಟ್ಟುತ್ತಿದ್ದವು. ಕೆ.ಸಿ.ರೆಡ್ಡಿ ಅವರು ಸರ್ಕಾರಕ್ಕೂ, ಕಾಂಗ್ರೆಸ್ಸಿಗೂ ಒಪ್ಪಂದ ಏರ್ಪಟ್ಟಿದೆ, ಜವಾಬ್ದಾರಿ ಸರ್ಕಾರ ಸ್ಥಾಪನೆಗೆ ಮಹಾರಾಜರು ಒಪ್ಪಿದ್ದಾರೆಂದು ಘೋಷಿಸಿದರು. ಇನ್ನು ಮುಂದೆ ಮೈಸೂರು ಕಾಂಗ್ರೆಸ್ ಯಾವ ವಿಧವಾದ ರಾಜಕೀಯ ಚಳವಳಿಯನ್ನೂ ನಡೆಸಬೇಕಾಗಿಲ್ಲ ಎಂದು ಘೋಷಿಸಿದರು.

ಹೊಸ ಜನತಾ ಸರ್ಕಾರ ಕೆ.ಸಿ.ರೆಡ್ಡಿ ಅವರ ನೇತೃತ್ವದಲ್ಲಿ ೧೯೪೭ ನೇ ಅಕ್ಟೋಬರ್ ೨೭ ರಂದು ಕಾರ್ಯಾರಂಭ ಮಾಡಿತು. ಅವರ ಮಂತ್ರಿ ಮಂಡಲ ಅರಳೇಪೇಟೆಯ ಕಾಂಗ್ರೆಸ್ ಭವನದಿಂದ ಅಠಾರ ಕಛೇರಿಗೆ ಮೆರವಣಿಗೆಯಲ್ಲಿ ಹೊರಟಾಗ ಅವರನ್ನು ಹಿಂಬಾಲಿಸಿ ಒಂದು ಲಕ್ಷ ಜನ ಹೋಗಿದ್ದರು. ಸತ್ಯಾಗ್ರಹಿಗಳು ಮತ್ತು ಸ್ವಾತಂತ್ರ್ಯ ಹೋರಾಟದ ಸೇನಾನಿಗಳ ಮಹತ್ವದ ಆಸೆಯನ್ನು ಈಡೇರಿಸಲಾದ ಪ್ರಜಾಪ್ರತಿನಿಧಿಗಳ ಸರ್ಕಾರದ ರಚನೆ ಆಯಿತು. ಹೀಗೆ ಮೈಸೂರು ರಾಜ್ಯವು ಏಕಕಾಲಕ್ಕೆ ಉಭಯ ದಾಸ್ಯಗಳಿಂದ ಬಿಡುಗಡೆ



ಹೊಂದಿ ರಾಜತಂತ್ರದಿಂದ ಜನತಾಂತ್ರಿಕ ವ್ಯವಸ್ಥೆಯಲ್ಲಿ ಹೊಸ ಮಾದರಿಯ ಸರ್ಕಾರದ ಕನಸೊಂದು ನನಸಾದ ದಿನ. ೪೨ ದಿವಸಗಳ ಕಾಲ ಸತ್ಯಾಗ್ರಹಿಗಳು ಕೈಗೊಂಡಿದ್ದ ಸತ್ಯಾಗ್ರಹವೂ ಯಶಸ್ವಿಯಾಯಿತು. ಎಲ್ಲಾ ವರ್ಗದವರ ಹೋರಾಟದ ಫಲವಾಗಿ ಜವಾಬ್ದಾರಿ ಸರ್ಕಾರ ಅಧಿಕಾರಕ್ಕೇರಿತು.

## ಚಳವಳಿಯ ಇತರೆ ಅಂಶಗಳು

ಮೈಸೂರು ಚಲೋ ಸತ್ಯಾಗ್ರಹದಲ್ಲಿ ಭಾಗವಹಿಸಲು ತಮಿಳುನಾಡು, ಆಂಧ್ರ, ಉತ್ತರ ಕರ್ನಾಟಕದಿಂದ ಸಾವಿರಾರು ಮಂದಿ ಸತ್ಯಾಗ್ರಹಿಗಳು ಹೊರಟು ಬರುವ ವಿಷಯವು ಸರ್ಕಾರಕ್ಕೆ ಮುಟ್ಟಿತು. ಇವರು ಬರದಂತೆ ತಡೆಯಲು ಗಡಿಗಳಲ್ಲಿ ಪೊಲೀಸರು ಮತ್ತು ಮಿಲಿಟರಿ ಕಾವಲನ್ನು ಹಾಕಲಾಯಿತು.ಸರ್ಕಾರವು ವೃತ್ತ ಪತ್ರಿಕೆಗಳ ಮೇಲೆ ನಿರ್ಬಂಧ ಹಾಕಿತು. ಈ ನಿರ್ಬಂಧಗಳನ್ನು ತೆಗೆದು ಹಾಕದಿದ್ದರೆ, ಸತ್ಯಾಗ್ರಹ ಹೂಡ ಬೇಕಾಗುವುದೆಂದು ತಾಯಿನಾಡು ಮಾಲೀಕರಾದ ಪಿ.ಆರ್.ರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಆದ ತೀರ್ಮಾನದ ಬಗೆಗೆ ಸರ್ಕಾರಕ್ಕೆ ಒಂದು ಪತ್ರವನ್ನು ಕೂಡ ಬರೆಯಲಾಗಿತ್ತು. ಇದೆಲ್ಲದರೊಂದಿಗೆ, ಹಳ್ಳಿಗಳಲ್ಲಿ ಕಾಂಗ್ರೆಸ್ ಸಮಿತಿಯ ಕಾರ್ಯಕರ್ತರಿಂದ ನಡೆಯುತ್ತಿದ್ದ ಚಳವಳಿಯನ್ನು ಮಟ್ಟ ಹಾಕಲು ಪೊಲೀಸರು ವಿಪರೀತ ದೌರ್ಜನ್ಯ ಮತ್ತು ದಬ್ಬಾಳಿಕೆಯನ್ನೂ ಕೂಡ ನಡೆಸಿದ್ದರು.

ಆದರೆ ಇದಕ್ಕೆ ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನಲ್ಲಿ ತಿರುಮಣಿ ಎಂಬುದೊಂದು ಗ್ರಾಮ ಮತ್ತು ಅಲ್ಲಿನ ಸುತ್ತ ಮುತ್ತಲಿನ ಹಲವು ಹಳ್ಳಿಯವರು ಸೇರಿಕೊಂಡು ಮೆರವಣಿಗೆ ಹೊರಟು ಪೊಲೀಸ್ ಠಾಣೆಯ ಮೇಲೆಯೇ ತ್ರಿವರ್ಣದ ರಾಷ್ಟ್ರಧ್ವಜವನ್ನೇ ಹಾರಿಸಿದರು ಎಂಬುದು ಮೈಸೂರು ಚಲೋ ಚಳವಳಿಗೆ ಇದು ಒಂದು ನಿದರ್ಶನವೇ ಆಗಿರುತ್ತದೆ. ಹೀಗೆ ಸತ್ಯಾಗ್ರಹಿಗಳು ಹಾಕಲಾಗಿದ್ದಂತಹ ರಾಷ್ಟ್ರಧ್ವಜವನ್ನು ಪೊಲೀಸರು ತೆಗೆದು ಹಾಕಿದರು. ಈ ವಿಷಯವು ಮೇಲಿನ ಅಧಿಕಾರಿಗಳಿಗೆ ತಿಳಿದ ಕೂಡಲೇ ಎರಡು ವಾಹನಗಳಲ್ಲಿ ಆಯುಧ ಹಿಡಿದ ಪೊಲೀಸರು ಈ ಸ್ಥಳಕ್ಕೆ ಬಂದರು. ಈ ಗ್ರಾಮಗಳಲ್ಲಿನ ಮನೆ ಮನೆಗಳಿಗೆ ನುಗ್ಗಿ ಲಾಠಿ ಪ್ರಹಾರ ಮಾಡಿದರು. ಮನೆಗಳನ್ನೆಲ್ಲಾ ಲೂಟಿ ಮಾಡಿದರು. ಲಾಠಿಯಿಂದ ಬಡಿದರು. ಪ್ರಜಾಪ್ರಭುತ್ವ ಜಾರಿಯಲ್ಲಿ ಇರುವ ಯಾವ ರಾಷ್ಟ್ರದಲ್ಲಿಯೂ ಕೇಳಿ ಬರದ ರೀತಿಯಲ್ಲಿ ಬೆಂಗಳೂರು ಮಹಾನಗರದಲ್ಲಿ ೮೬ ಗಂಟೆ ಕಾಲ ೧೪೪ ಸೆಕ್ಷನ್ ಆಜ್ಞೆಯನ್ನು ಜಾರಿ ಮಾಡಲಾಯಿತು.

ಆಜಾದ್ ಸರ್ಕಾರ ಸಂಘಟನೆ ಮಾಡುತ್ತಿದ್ದ ಕೆ.ಆರ್.ಶ್ರೀಧರಮೂರ್ತಿ ಅವರ ತಂದೆ ಬೆಂಗಳೂರಿನಲ್ಲಿ ಮೃತಪಟ್ಟರು. ದೇಶ ಕಾರ್ಯದಲ್ಲಿ ತೊಡಗಿದ್ದ ಅವರು ತಂದೆಯ ಅಂತ್ಯಕ್ರಿಯೆಗೆ ಬರಲಿಲ್ಲ. ಇದು ಒಬ್ಬ ಸ್ವಾತಂತ್ರ್ಯ ಹೋರಾಟಗಾರನಲ್ಲಿದ್ದಂತಹ ದೇಶಭಕ್ತಿಗೆ ಹಿಡಿದ ಕನ್ನಡಿಯೇ ಆಗಿತ್ತು. ಈ ಮಾದರಿಯಲ್ಲಿ ಅದೇಷ್ಟೋ ಸತ್ಯಾಗ್ರಹಿಗಳು ತಮ್ಮ ತಂದೆ, ತಾಯಿ, ಸೋದರ ಸಂಬಂಧಿಗಳ ಸಾವಿನ ಸಂದರ್ಭದಲ್ಲಿ ಹಾಜರಾಗದೇ ಇರುವ ಪ್ರಕರಣಗಳನ್ನು ಕೂಡ ಗುರುತಿಸ ಬಹುದು. ಕೆ.ಆರ್.ಶ್ರೀಧರಮೂರ್ತಿ ಅವರು ಪತ್ರಿಕೆಯನ್ನು ಮತ್ತ?ಷ್ಟು ಚುರುಕುಗೊಳಿಸಿ, ಕುಸಿಯುತ್ತಿರುವ ಸರ್ಕಾರಕ್ಕೆ ಕೊನೆಯ ಪ್ರಹಾರ ಹಾಕಿ ಬಿಡಿ ಎಂದು ಹೇಳಿದರು. ಈ ಹೋರಾಟದ ಐದೇ ವಾರಗಳಲ್ಲಿ ಮಹಾರಾಜರ ಸರ್ಕಾರ ಕುಸಿದು ಬಿದ್ದಿತು. ಈ ಐದು ವಾರಗಳಲ್ಲಿ ನಡೆದ ದಬ್ಬಾಳಿಕೆ ವರ್ಣನಾತೀತವಾಗಿತ್ತು. ಒಂದೇ ತಿಂಗಳಲ್ಲಿ ಹದಿನಾರು ಬಾರಿ ಗುಂಡಿನ ಮಳೆಯಾಗಿ ಹದಿನಾರು ಜನರು ಬಲಿಯಾದರು,

೧೯೪೨ ರಲ್ಲಿ ಗಾಂಧೀಜಿ ಅವರ ಬಂಧನದ ವಾರ್ತೆ ಆಗಸ್ಟ್ ೯ ಕ್ಕೆ ತಲುಪಿತು. ಆ ದಿನ ವಿದ್ಯಾರ್ಥಿಗಳು ತರಗತಿಯಿಂದ ಹೊರ ಬಂದರು. ಮರು ದಿನ ಒಂಟಿಕೊಪ್ಪಲು ಮುಖ್ಯ ಚೌಕದಲ್ಲಿ ಬಹಿರಂಗ ಸಭೆ ಏರ್ಪಡಿಸಲಾಗಿತ್ತು. ರಾಮಕೃ?ಣಾಶ್ರಮದ ಅಧ್ಯಕ್ಷರಾಗಿದ್ದಂತಹ ಶ್ರೀಶಾಂಭವಾನಂದಾಜಿ ಅವರು ಅಧ್ಯಕ್ಷತೆಯನ್ನು ವಹಿಸಿದ್ದರು. ಪ್ರಧಾನ ಭಾ?ಣಕಾರರಾಗಿ ಕವಿ ಪುಂಗವ ಕುವೆಂಪು ಅವರು ಆಗಮಿಸಿ, ಗಾಂಧೀಜಿ ಅವರನ್ನು ಬುದ್ಧ, ಜಿನ, ಕ್ರಿಸ್ತ ಮತ್ತು ಪರಮ ಹಂಸ ಸದೃಶರಾದ ಯುಗ ಪುರು?ರೆಂದು ಬಣ್ಣಿಸಿ ಬರೆದಿದ್ದ ಕವನ ರತ್ನವನ್ನು ಭಾವ ಪೂರ್ಣವಾಗಿ ಓದಿದ್ದರು.ಈ ಸಭೆಯು ಮಂತ್ರ ಮುಗ್ಧವಾಯಿತು. ಅನಂತರ ಎಂ.ಎನ್.ಜೋಯಿಸ್ ಅವರು ರಚಿಸಿದ್ದ ಜೋಗುಳದ ಧಾಟಿಯ ಗೀತೆಯನ್ನು ಹಾಡಿದರು. ಅಲ್ಲಿದ್ದವರೆಲ್ಲರೂ ಕೂಡ ದನಿ ಗೂಡಿಸಿದರು. ಅದು ಗಾಂಧೀಜಿ ಅವರ ಭಜನೆಯಂತೆಯೇ ಇತ್ತು. ಮುಂದೆ ಮೈಸೂರಿನಲ್ಲಿ ಪ್ರಭಾತ ಫೇರಿ, ಮೆರವಣಿಗೆಗಳಲ್ಲಿ ಈ ಗೀತೆ ಹಾಡತೊಡಗಿದರು: ಅದೇನೆಂದರೆ;

**ಜಮ್ ಜಯ್ ಗಾಂಧೀ ಮೋಹನ ಗಾಂಧೀ**
**ತ್ಯಾಗೀ ಯೋಗೀ ಉದಾರ ಸುಧೀರ**
**ದೇಶೋದ್ಧಾರಕ ಸ್ವಾತಂತ್ರ್ಯವೀರ,**



**ಸತ್ಯ ಅಹಿಂಸಾತ್ಮಕ ದೀನಮಂದಾರ, ॥ಅಪ॥**
**ಸತ್ಯಾಗ್ರಹಧರ್ಮದಾಚಾರನೆ**
**ಸ್ವಾತಂತ್ರ್ಯ ತತ್ವದ ಗುರುವರನೆ ॥**
**ಅಹಿಂಸಾವ್ರತ ಸಾರಿ ಮುಂದಾಗುವೆ**
**ಸ್ವಾತಂತ್ರ್ಯ ಸಂಗ್ರಾಮಕೆದೆಯೊಡ್ಡುನೆ । – ಇತ್ಯಾದಿ.**

ಆದರೆ ಅಧ್ಯಕ್ಷತೆ ವಹಿಸಿದ ಸ್ವಾಮೀಜಿಯವರಿಗೆ ಮಾತ್ರ ಭಜನೆಯ ಧಾಟಿಯ ಈ ಹಾಡು ಹಿಡಿಸಲಿಲ್ಲ. ಮುಗ್ಧ ಜನತೆಯಲ್ಲಿ ಭಕ್ತಿಭಾವ ಬಿತ್ತುವ ಭಾವಗೀತೆಗಳ ಬದಲು: ವೀರರಸ ಉಕ್ಕಿಸುವ ವೀರಗೀತೆಗಳ ಅವಶ್ಯಕತೆಯನ್ನು ಒತ್ತಿ ಹೇಳಲಾಗಿತ್ತು. ಅವರ ಈ ಹೇಳಿಕೆಯಿಂದಾಗಿ ಮೂಡಿ ಬಂದ ಮತ್ತೊಂದು ದೀಕ್ಷಾಗೀತೆ “ಆರಾಧನೆ”. ಅದೇನೆಂದರೆ;

**ಸ್ವಾತಂತ್ರಶಕ್ತಿಯನ್ನೆಂದೆಂದಿಗೂ ನಮ್ಮ**
**ಸ್ಥೈರ್ಯದಿಂದಿಹ ಹೃದಯಪೀಠದಲ್ಲಿರಿಸಿ,**
**ದೀನಮಾನವರೆಲ್ಲ ಸೇವಾಮಂ ನಮ್ಮ**
**ನಿತ್ಯ ಜೀವನವಂತ್ರಸೂತ್ರದಿಂ ಧರಿಸಿ,**
**ಭೀಕರದ ರೌದ್ರತೆಯ ಜೀವನಾಡಿಗೆ ಕಟ್ಟಿ**
**ಮಿಥ್ಯತೆಯ ಕುಹಕಮಂ ಬರಸೆಳೆದು ದಹಿಸಿ,**
**ಸತ್ವ–ರಕವ ಹೊಯ್ದು ಖಡ್ಗದಿಂದೆದೆಯಿರಿದು**
**ಸಿಡಿಲ ತೀವ್ರತೆ ಬರಿಸಿ ದೀಕ್ಷೆಯಂ ಧರಿಸಿ**
**ಸ್ವಾತಂತ್ರ್ಯ ಸಾಮ್ರಾಜ್ಯಲಕ್ಷ್ಮಿ ಯರ್ಣಕೋಲಿಸಿಟ್ಟು**
**ಬಿಸಿನೆತ್ತರಲ್ಲಾರಾಧಿಸೆ !!**

ಮರುದಿನ ಸ್ವಾಮಿಜಿ ಅವರ ಮುಂದೆ ಈ ಗೀತೆ ಓದಿದಾಗ “ಜನತೆಯನ್ನು ಜಾಗೃತಿ ಗೊಳಿಸ ಬಲ್ಲಂತಹ ಗೀತೆಗಳು ಹರಿದು ಬರಲಿ” ಎಂದು ಆಶೀರ್ವದಿಸಿದರು. ಇಂಥ ಅನೇಕ ಗೀತೆಗಳನ್ನು ಎಂ.ಎನ್.ಜೋಯಿಸ್ ಅವರು ರಚಿಸಿದ್ದರು.

“ಕ್ವಿಟ್ ಇಂಡಿಯಾ” ಚಳವಳಿ ಮೈಸೂರು ನಗರದಲ್ಲಿ ಯಾವ ಬಗೆಯ ಅಹಿತಕರ ಘಟನೆಗಳೂ ಇಲ್ಲದೆ ಯಶಸ್ವಿಯಾಗ ಬೇಕಾದರೆ ಮುಖ್ಯ ಕಾರಣ ವಿದ್ಯಾರ್ಥಿ ನಾಯಕರ ಶಿಸ್ತು, ಸಂಯಮ, ಸಮಯ ಸ್ಫೂರ್ತಿ, ಮುಂದಾಲೋಚನೆ,

ರಹಸ್ಯ ಪಾಲನೆ, ಕಷ್ಟ ಸಹಿಷ್ಣುತೆ, ಉದಾರ ಸಹಕಾರ, ನಿಷ್ಠಾವಂತ ನಡವಳಿಕೆ, ಮೇಲಾಗಿ ಮಾನವೀಯತೆಯ ನೆಲೆಯ ಅನುಕಂಪಗಳಾಗಿದ್ದವು. ಕಠಿಣ ಹೃದಯಿಗಳೆಂದು ಹೆಸರಾದ ಪೊಲೀಸರೂ ಸ್ವರಾಜ್ಯ ತತ್ವಕ್ಕೆ ಪ್ರವರ್ತನೆಯಾಗುವಷ್ಟು ಪರಿಣಾಮಕಾರಿಯಾಗಿತ್ತು ಈ ವಿದ್ಯಾರ್ಥಿಗಳ ಚಳವಳಿ ಎನ್ನಬಹುದು. ಮುಂಚೂಣಿಯಲ್ಲಿದ್ದ ವಿದ್ಯಾರ್ಥಿನಾಯಕರೆಂದರೆ ಎಂ.ವಿ.ಕೃಷ್ಣಪ್ಪ, ಎಚ್.ವೈ.ಶಾರದಾಪ್ರಸಾದ್, ಶ್ರೀಮತಿ ಕಮಲಾ ಶಾರದಾಪ್ರಸಾದ್, ಕೆ.ಭೀಮಯ್ಯ ಮತ್ತು ರಂಗೇಗೌಡ, ಭೂಪಾಲಂ, ಡಿ.ಎಂ.ಸಿದ್ದಯ್ಯ, ಬಿ.ರಾಚಯ್ಯ, ಕೆ. ಪ್ರಭಾಕರ್, ಹೆನ್ರಿ ದೇವಿದಾಸ್, ಅಬ್ದುಲ್ ಗಫಾರ್, ವೈ.ಕೆ.ರಾಜಗೋಪಾಲ್, ಶೇ?ರಾಘವಾಚಾರ್, ನರುಳ ಸಿದ್ದಯ್ಯ. ಇವರಲ್ಲದೆ ಕರಿಕುರಿಗಳಿಗೆ ಬುದ್ಧಿ ಕಲಿಸಲು ದೃಢಕಾಯರ ವಿಶೇಷ ಅಂಗರಕ್ಷಕ ದಳ ಒಂದಿತ್ತು. ಇದರಲ್ಲಿ ಇದ್ದವರು ಕೆಂಗೇಗೌಡ, ಹೊಸಟ್ಟ ಮುನಿರೆಡ್ಡಿ, ಪಿರಿಯಾಪಟ್ಟಣದ ವೆಂಕಟರಾಂ, ಎಚ್. ಬಿ. ಕೆಂಪೇಗೌಡ, ನಾನಾರಾವ್ ಶ್ರೀಕಂಠಯ್ಯ ಮತ್ತು ಸರಕಾರಿ ವಿರೋಧಿ ಚಟುವಟಿಕೆಗಳ ಕಾರಣ ಈ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ವಗೈರೆ ಸೌಲಭ್ಯ ದೊರಕದಂತೆ ಮಾಡಲು ಪ್ರಿನ್ಸಿಪಾಲ್ ರೋಲೋ ಆಪ್ತರು ಇವರ ಒಂದು ಕರಿಪಟ್ಟ ಮಾಡಿಟ್ಟಿದ್ದರು. ಆಂದೋಲನದ ಲಾವಣಿ ಹಾಡುತ್ತಿದ್ದ ಗ.ಸ.ಹಾಲಪ್ಪ ಮತ್ತು ಕೆ.ಆರ್.ಲಿಂಗಪ್ಪ ಅವರುಗಳ ಹೆಸರೂ ಈ ಕರಿಪಟ್ಟಿಯಲ್ಲಿ ಇತ್ತು. ಕಾಲೇಜುಗಳು ಮುಚ್ಚಿದ ಕೂಡಲೇ ಅನೇಕ ಸಿರಿವಂತರ ಮಕ್ಕಳು ತವರಿಗೆ ಮರಳಿದರು, ಕೆಲವರು ಮಾತ್ರ ಉಳಿದರು.

ಮಹಾರಾಜ ಕಾಲೇಜು ವಿದ್ಯಾರ್ಥಿನಿಲಯದಲ್ಲಿನ ಗೋಪುರ ಗಡಿಯಾರದ ರೋಲೋ ಆಕ್' ಎಂಬ ಹೆಸರಿನ ಬರಹವನ್ನು ರಾತ್ರೋರಾತ್ರಿ "ಆಜಾದ್ ಕಾರ್ಕ್" ಎಂದು ಬದಲಿಸಿದ ಸಾಹಸದ ಕೆಲಸವಾದಾಗ ಅನೇಕ ವಿದ್ಯಾರ್ಥಿಗಳನ್ನು ಬಂಧಿಸಲು ಆಜ್ಞೆ ಆಗಿದೆಯೆಂದು ಗೊತ್ತಾಯಿತು. ವಿದ್ಯಾರ್ಥಿ ನಾಯಕರ ಗುಪ್ತ ಸಭೆ ಆಯಿತು. ಜಿಲ್ಲೆಗೆ ಒಬ್ಬರು, ಇಬ್ಬರಂತೆ ಸಂಚಾಲಕರನ್ನು ಆರಿಸಿ, ಅವರೆಲ್ಲ ನಿಗೂಢರಾಗಿದ್ದು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಆಂದೋಲನವನ್ನು ಮುಂದುವರಿಬೇಕೆಂದು ತೀರ್ಮಾನಿಸಿದರು. ಅದರಂತೆ ಎಂ.ಎನ್. ಜೋಯಿಸರ ಪಾಲಿಗೆ ಬಂದುದ್ದು ಮಾತ್ರ ಬೆಂಗಳೂರು ಗ್ರಾಮೀಣ ಜಿಲ್ಲೆಯೇ ಆಗಿರುತ್ತದೆ.



ಮೈಸೂರು ಪ್ರಾಂತ್ಯ ಕಾಂಗ್ರೆಸ್ ಸಮಿತಿಯೂ ಈಗಾಗಲೇ ಮೈಸೂರು ಆಠಾರಾ ಕಚೇರಿಯ ಮುಂದೆ ಸತ್ಯಾಗ್ರಹ ನಡೆಸಲು ನಿರ್ದಿಷ್ಟ ಪಡಿಸಿದ ದಿನವೇ ಬೆಂಗಳೂರಿನ ಮೈಸೂರು ಬ್ಯಾಂಕು ಚೌಕದ ಮಾರುತಿ ಗುಡಿಯಿಂದ ಜಾಥಾ ಹೊರಡುವುದೆಂದು ಅರಳೇಪೇಟೆ ಕಾಂಗ್ರೆಸ್ ಕಚೇರಿಯಿಂದ ಪ್ರಕಟಣೆ ಬಂತು. ಸರ್ವತೋಪಿನಲ್ಲಿ ಯೋಜನೆಯೊಂದನ್ನು ರೂಪಿಸಲಾಗಿತ್ತು. ಐದು ಜನಕ್ಕಿಂತ ಹೆಚ್ಚು ಜನ ಒಂದೆಡೆ ಸೇರಬಾರದೆಂದು ಆಜ್ಞೆ ಆಗಿತ್ತು. ಆ ದಿನ ಬೆಳಗ್ಗೆ ಮಾರುತಿ ಗುಡಿ ಮೇಲೆ ಬಾವುಟ ಹಾರಿಸಲು ಕೆಲವು ವಿದ್ಯಾರ್ಥಿಗಳನ್ನು ತಯಾರು ಮಾಡಲಾಗಿತ್ತು ಮತ್ತು ಇವರೊಟ್ಟಿಗೆ ಸೆಂಟ್ರಲ್ ಕಾಲೇಜು ವಿದ್ಯಾರ್ಥಿಯಾಗಿದ್ದಂತಹ ಆವಲಕೊಂಡರೆಡ್ಡಿಗೆ ಜವಾಬ್ದಾರಿಯನ್ನು ಕೂಡ ನೀಡಲಾಗಿತ್ತು ಎಂಬುದು ತಿಳಿದು ಬಂದಿರುತ್ತದೆ.

೧೯೪೨ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿ ಬಿನ್ನಿಮಿಲ್ಲಿನ ಕೆಲಸ ಕಳೆದುಕೊಂಡಿದ್ದ ವಿ. ನಾರಾಯಣಸ್ವಾಮಿ ಮತ್ತು ಬಿನ್ನಿಮಿಲ್ಲಿನ ಕೆಲಸಗಾರ ಶ್ರೀ ಮುನಿಸ್ವಾಮಿ ಬಿನ್ನಿಮಿಲ್ ಕಾರ್ಮಿಕರ ಸಂಘದ ಕಾರ್ಯದರ್ಶಿಗಳಾಗಿದ್ದ ಶ್ರೀ ಕೆ.ಬಿ. ಶ್ರೀನಿವಾಸನ್‌ರವರಿಂದ ಮೊದಲ ದಿನವೇ ಒಂದು ರಾಷ್ಟ್ರಧ್ವಜವನ್ನು ಕೇಳಿ ತೆಗೆದುಕೊಂಡು ಹೋದವರು ಅಠಾರಾ ಕಚೇರಿಯ ಕಾವಲುಗಾರರಿಗೆ ಒಂದೊಂದು ಸಣ್ಣ ಧ್ವಜ ಸ್ವಲ್ಪ ಸಿಹಿತಿಂಡಿ ಹಂಚುತ್ತಾ ಹೋದರು. ಈ ಹಂಚುವ ಕೆಲಸವನ್ನು ಪೂರ್ಣಗೊಳಿಸಲು ಮುನಿಸ್ವಾಮಿಗೆ ಬಿಟ್ಟು ನಾರಾಯಣಸ್ವಾಮಿ ಹೈಕೋರ್ಟು ಕಡೆಯ ಮೆಟ್ಟಿಲುಗಳನ್ನು ಹತ್ತಿ ಅಲ್ಲಿಂದ ಮೂರನೆಯ ಅಂತಸ್ತಿನ ಮಹಡಿಯ ಮೇಲೆ ಇರುವ ಧ್ವಜ ಸ್ತಂಭದ ಬಳಿ ನಡೆದರು. ಕೂಡಲೇ ಮೈಸೂರು ಧ್ವಜ ಇಳಿಸಿ, ರಾಷ್ಟ್ರಧ್ವಜವನ್ನು ಏರಿಸಿ, ಸರಸರನೆ ಇಳಿದು ಬಂದು ತಮ್ಮ ದಾರಿ ಹಿಡಿದರು. ಈ ವೇಳೆಗೆ ಮುನಿಸ್ವಾಮಿ, ತಿಂಡಿ ಹಂಚಿದವರೇ ಅಲ್ಲಿಂದ ಕಂಬಿ ಕಿತ್ತಿದ್ದರು. ನಾರಾಯಣಸ್ವಾಮಿ ಅಠಾರಾ ಕಚೇರಿಯಿಂದ ನೇರ ತುಳಸಿ ತೋಟದಲ್ಲಿದ್ದ ಪೌರವಾಣಿ ಕಚೇರಿಗೆ ಬಂದು, ಅಠಾರಾ ಕಚೇರಿಯ ಮೇಲೆ ರಾಷ್ಟ್ರಧ್ವಜ ಹಾರಿಸಿರುವುದಾಗಿಯೂ ತಿಳಿಸಲಾಗಿತ್ತು.

೧೯೪೭ ನೇ ಸೆಪ್ಟೆಂಬರ್ ಒಂದನೆಯ ತಾರೀಕಿನಿಂದ ದೇಶಾದಾದ್ಯಂತ ಆರಂಭವಾಗ ಬೇಕಾಗಿದ್ದ ಬಿರುಸಿನ ಸತ್ಯಾಗ್ರಹವನ್ನು ಮೊಳಕೆಯಲ್ಲಿಯೇ ಚಿವುಟಿ ಹಾಕುವ ಅನೇಕ ಪ್ರಯತ್ನಗಳು ನಡೆದವು. ಪ್ರಯತ್ನಗಳಲ್ಲಿ ಕಾಂಗ್ರೆಸ್ಸೇತರ ಸಾರ್ವಜನಿಕ ಮಹಾಸಭೆ ಏರ್ಪಡಿಸುವ ಪ್ರಯತ್ನವೂ ಒಂದು. ಈ ಮೂಲಕ

ಆ ತಲೆಮಾರಿನ ಪ್ರಗತಿ ವಿರೋಧಿಗಳು, ಸಮಯ ಸಾಧಕರು, ಬಾಲ ಬಡುಕರು ತಾವೆಂದು ಜಗಜ್ಜಾಹೀರು ಮಾಡಿ ಕೊಂಡ ಇವರುಗಳು ಯಾರೆಂದರೆ ಎಂ.ರಾಮಚಂದ್ರರಾವ್‌ಸಿಂಧ್ಯ, ಮಂಡಿ ಎನ್.ರುದ್ರಯ್ಯ, ಎಂ.ಕಸ್ತೂರಿ ರಂಗಶೆಟ್ಟಿ,ಡಿ. ಆರ್.ಮಾಧವಕೃಷ್ಣಯ್ಯ, ವೆಂಕಟನಾರಾಯಣ, ಎಸ್.ಧೋಂಡುಸಾ, ಎಂ.ಶಿವರಾಮಯ್ಯಶೆಟ್ಟಿ, ಬಿ.ಸಿ.ಆಂಜನಪ್ಪ, ಎಸ್.ಬಿ. ನಂಜುಂಡಯ್ಯ, ಡಿ. ವೆಂಕಟರಮಣಪ್ಪ, ಶ್ರೀಮತಿ ಲಕ್ಷ್ಮಿದೇವಿ ರಾಮಣ್ಣ, ಶ್ರೀಮತಿ ರತ್ನಮ್ಮ ಐಸಾಕ್, ಕೆ.ಸಿ. ಮರಿನಂಜುಂಡಯ್ಯ, ಯಜಮಾನ್ ಕೆಂಚಪ್ಪ, ಎಸ್.ವಿ. ಶ್ರೀನಿವಾಸ ಶೆಟ್ಟಿ, ಟಿ.ಎಲ್. ಗಂಗೋಜಿರಾವ್, ಮಿಶ್ರಿಲಾಲ್ ಪರಾಸ್‌ಮಲ್, ಎನ್. ದಾಸಪ್ಪ, ಕೋಟಾ ಕಾಮಾಕ್ಷಯ್ಯ, ಬಿ, ಸಕಲ್‌ಚಂದ್, ರುದ್ರಪ್ಪಶೆಟ್ಟಿ, ಡಿ. ರಾಮೇಶ್ವರಸ್ವಾಮಿ, ಅಡಕೆ ಮಂಡಿ ಮುದ್ದುವೀರಪ್ಪ, ದೊ.ಶಿ.ಗುರುಸಿದ್ದಪ್ಪ, ಮಾಮೂಲುಪೇಟೆ ರಂಗಸ್ವಾಮಪ್ಪ, ದೇವತ ಶ್ರೀನಿವಾಸಶೆಟ್ಟಿ, ಎ.ಜೆ.ಖಲೀಲ್, ಕೆ.ಎಂ.ನಾಗಣ್ಣ, ಡಾ. ಜೆ.ಎಂ.ಬಾಬೂರಾವ್, ಬಿ.ವೀರನಾಗಪ್ಪ, ಇವರುಗಳು. ಇವರಲ್ಲಿ ಕೆಲವರು ಕಾಂಗ್ರೆಸ್ ಸರ್ಕಾರ ರಚನೆಯಾಗುತ್ತಲೇ ಇದ್ದಕ್ಕಿದ್ದಂತೆ ಕಾಂಗ್ರೆಸ್ಸಿನ ಪರಮ ಸ್ನೇಹಿತರಾದರು. ಸರ್ಕಾರದಿಂದ ಸೌಲತ್ತುಗಳನ್ನು ಪಡೆಯುವುದರಲ್ಲಿ, ಖಜಾನೆ ದೋಚುವುದರಲ್ಲಿ ಮುಂದಾದರು ಎಂಬುದು ಕೂಡ ಜಾಗತಿಕ ಸತ್ಯದ ಸಂಗತಿಯೇ ಆಗಿರುತ್ತದೆ.

ವಿದ್ಯಾರ್ಥಿ ಸಂಘಗಳ ಪೈಕಿ ಪ್ರಾತಿನಿಧಿಕವಾಗಿಯೂ, ಪ್ರತಿಭಾಶವಾಗಿ ಕೆಲಸ ಮಾಡುತ್ತಿದ್ದ ವಿದ್ಯಾರ್ಥಿ ಕಾಂಗ್ರೆಸ್ ಸತ್ಯಾಗ್ರಹಕ್ಕೆ ವಿದ್ಯಾರ್ಥಿಗಳ ಬೆಂಬಲ ಮಹತ್ತರ ಪಾತ್ರ ವಹಿಸಿತು. ವಿದ್ಯಾರ್ಥಿ ಫೆಡರೇಷನ್, ಕಾಂಗ್ರೆಸ್ಸಿನಷ್ಟು ಪ್ರಾತಿನಿಧಿಕ ಸಂಸ್ಥೆಯಾಗಿರದಿದ್ದರೂ ಅದೂ ಕೂಡ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳಲು ಮುಂದೆ ಬಂದಿತು. ಈ ಸಂಸ್ಥೆಯ ಚಾಲಕತ್ವ ಕಮ್ಯುನಿಸ್ಟ್ ನಾಯಕರ ಕೈಯಲ್ಲಿ ಇತ್ತು. ಮೈಸೂರು ಕಾಂಗ್ರೆಸ್ಸಿನ ಸತ್ಯಾಗ್ರಹ ಘೋಷಣೆಯನ್ನು ಸ್ವಾಗತಿಸಿದ್ದೆ ಅಲ್ಲದೆ. ಅದಕ್ಕೆ ಸಂಪೂರ್ಣ ನೆರವನ್ನು ನೀಡುವುದಾಗಿ ತಮಿಳುನಾಡು ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ.ಕಾಮರಾಜ್, ಬೊಂಬಾಯಿ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಎಸ್.ಕೆ.ಪಾಟೀಲ್ ಇವರು ಘೋಷಣೆ ಮಾಡಿದರು. ಸತ್ಯಾಗ್ರಹ ಆರಂಭವಾದ ಮೇಲೆ ಕೇರಳದಿಂದ ತಂಡೋಪತಂಡವಾಗಿ ಸತ್ಯಾಗ್ರಹಿಗಳು ಮೈಸೂರಿಗೆ ಬಂದರು. ಮೈಸೂರೇತರ ಕರ್ನಾಟಕದ ಜನರೆಲ್ಲ–ಅಷ್ಟೇಕೆ ಇಡೀ ಭಾರತದ ಕನ್ನಡಿಗರೆಲ್ಲ ಮೈಸೂರು ಕಾಂಗ್ರೆಸ್ ಸತ್ಯಾಗ್ರಹದಲ್ಲಿ ಭಾಗವಹಿಸುವುದಾಗಿ ಘೋಷಿಸಿದ್ದು ಮಾತ್ರವಲ್ಲದೆ,



ಜನಬಲ, ದನಬಲವನ್ನೂ ಒದಗಿಸಲು ಸಿದ್ಧರಾದರು ಒಟ್ಟಿನಲ್ಲಿ ಮೈಸೂರು ಕಾಂಗ್ರೆಸ್ಸಿಗಾಗಿಯೇ ವರ್ಷಾಂತರಗಳಿಂದ ದುಡಿದು ಜನಜಾಗೃತಿ ಉಂಟು ಮಾಡಿದ ಪ್ರಾಂತ್ಯ ಸ್ಮರಣೀಯರಾದ ಮೈಸೂರು ವೆಂಕಟಕೃಷ್ಣಯ್ಯ (ತಾತಯ್ಯ) ಹೊಸಕೊಪ್ಪ ಕೃಷ್ಣರಾಯ ಅವರು, ಸಂಪಿಗೆ ವೆಂಕಟಪತಯ್ಯ ಅವರು, ಭದ್ರಣ್ಣ, ಎಚ್.ಸಿದ್ದಯ್ಯ, ಎನ್.ಎನ್.ಚದೂರ, ಕೆ.ಟಿ.ಭಾಷ್ಯಂ, ತಗಡೂರು ರಾಮಚಂದ್ರರಾಯ ಅವರು, ಟಿ. ಸಿದ್ದಲಿಂಗಯ್ಯ ಅಂತಹ ದೇಶಪ್ರೇಮಿಗಳ ಸತತ ಪ್ರಯತ್ನದಿಂದಾಗಿ ಮೈಸೂರಿನಲ್ಲಿ ಜಾಗೃತಿ ಉಂಟಾಯಿತು. ರಾಜಕೀಯ ಪ್ರಜ್ಞೆಯೂ ಕೂಡ ಬೆಳೆಯಿತು.

ಹುತಾತ್ಮರಾದ ಪ್ರಹ್ಲಾದ ಶೆಟ್ಟಿ, ಗುಂಡಪ್ಪ, ಶಂಕರಪ್ಪ, ರಾಮಚಂದ್ರ, ರಾಮಸ್ವಾಮಿ, ನರಸಿಂಹಯ್ಯ, ಉಗ್ರಪ್ಪ, ಈಸೂರಿನ ಅಮರ ತ್ಯಾಗಿಗಳು, ಶ್ರವಣಬೆಳಗೊಳದ ಕಲಿಗಳು, ವಿದುರಾಶ್ವತ್ಥದ ವೀರರು, ಮೈಸೂರಿನ ಸತ್ಯಾಗ್ರಹಗಳಲ್ಲಿ ಬೆಳಕಿಗೆ ಬಾರದ ಅಸಂಖ್ಯಾತ ವೀರ ಸತ್ಯಾಗ್ರಹಿಗಳೂ ಈ ಸ್ವಾತಂತ್ರ್ಯ ಸೌಧವನ್ನು ಕಟ್ಟುವ ಕೆಲಸದಲ್ಲಿ ಅಡಿಗಲ್ಲುಗಳೇ ಆಗಿದ್ದಾರೆ. ಇವರೆಲ್ಲರ ದುಡಿಮೆ ಈಗ ಸಾರ್ಥಕವಾಯಿತು. ಅವರ ಅಸದೃಶ ತ್ಯಾಗ ಬಲಿದಾನಗಳಿಂದ ಸಂಪೂರ್ಣ ಜವಾಬ್ದಾರಿ ಸರ್ಕಾರ ಸ್ಥಾಪನೆ ಆಯಿತು. ಈ ಸಾಧನೆಯ ಫಲವಾಗಿ ಸರ್ವಸಮಾನತೆಯ ತಳಹದಿಯ ಮೇಲೆ ಜಾತೀಯತೆಯ ಸೋಂಕಿಲ್ಲದ ನೂತನ ಸಮಾಜವೊಂದು ಸ್ಥಾಪಿತವಾಗಲಿ ಎಂಬುದು ಎಲ್ಲರ ಉದ್ದೇಶವಾಗಿತ್ತು.

ಪತ್ರಿಕೆಗಳ ಪಾತ್ರ – ಭಾರತವು ಬ್ರಿಟಿಷರಿಂದ ೧೯೪೭ ನೇ ಆಗಸ್ಟ್ ೧೫ ರಂದು ಸ್ವಾತಂತ್ರ್ಯವನ್ನು ಪಡೆಯಿತು. ಅದರ ಕಾವಿನ ಕಾರಣ ಮತ್ತು ಪರಿಣಾಮದಿಂದಾಗಿಯೇ ನಾವು ೧೯೪೭ ನೇ ಅಗಸ್ಟ್ ೧೫ ರಂದು ಭಾರತವು ಬ್ರಿಟಿಷ್ ಆಡಳಿತದಿಂದ ಸ್ವಾತಂತ್ರ್ಯ ಪಡೆಯಲು ಸಾಧ್ಯವಾಯಿತು.ಇದನ್ನು ಅಂದಿನ ಜನಪ್ರಿಯ ಪತ್ರಿಕೆಗಳಾದ ದಿ ಹಿಂದೂ, ದಿ ನ್ಯೂಇಂಡಿಯ, ಮರಾಠ ಮುಂತಾದವು ಮತ್ತು ಕೆಲವು ಸ್ಥಳೀಯ ಪತ್ರಿಕೆಗಳಾದ ಕರ್ನಾಟಕ ಪ್ರಕಾಶಿತ, ಸೂರ್ಯೋದಯ ಪ್ರಕಾಶಿತ, ವೃತ್ತಾಂತ, ಚಿಂತಾಮಣಿ ಮತ್ತು ಸಾಧ್ವಿ ಪ್ರಮುಖವಾಗಿದ್ದವು. ಇವುಗಳು ರಾಷ್ಟ್ರೀಯ ಚಳುವಳಿಯ ಪ್ರಭಾವ ಹೇಗೆ ಮೈಸೂರು ರಾಜ್ಯವನ್ನು ಪ್ರಭಾವಿಸಿತ್ತು ಹಾಗೂ ಇಲ್ಲಿನ ಚಳವಳಿಗಾರರು ಹೇಗೆ ಚಳವಳಿಯನ್ನು ರೂಪಿಸಿ ತಮ್ಮದೇ ಆದಂತಹ ಕೊಡುಗೆಗಳನ್ನು ವಿವಿಧ ನೆಲೆಗಳಲ್ಲಿ ನೀಡಿದ್ದರು ಎಂಬುದನ್ನು

ದಾಖಲಿಸಿ ಹೊರ ಜಗತ್ತಿಗೆ ನೀಡಿದ್ದವು ಎಂಬುವುದು ಇಂದಿನ ಚಾರಿತ್ರಿಕ ಘಟನೆಯೇ ಆಗಿದೆ.

ಪೌರವಾಣಿ ಪತ್ರಿಕೆಯ ಮೇಲ್ವಿಚಾರಣೆಯನ್ನು ಅನೇಕ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದ್ದವರ ನೆರವಿನಿಂದ ಕೈಗೊಂಡು ಮೊದಲೇ ಗೊತ್ತು ಮಾಡಿದ್ದ ತಾರೀಕಿಗೆ ಮೊದಲನೆಯ ಸಂಚಿಕೆಯನ್ನು ಹೊರತಂದರು. ಇನ್ನು ಆ ಕಾಲದಲ್ಲಿ ಮೈಸೂರು ಚಲೋ ಸತ್ಯಾಗ್ರಹ ಆರಂಭವಾಗುವುದೆಂಬುದನ್ನು ಮನಗಂಡು, ಒಂದೆರಡು ತಿಂಗಳೊಳಗಾಗಿ ವಾರಪತ್ರಿಕೆಯನ್ನು ದಿನಪತ್ರಿಕೆಯಾಗಿ ಮಾರ್ಪಡಿಸಲಾಯಿತು. ಮೂರು ಕಾಸಿನ, ಎರಡು ಹಾಳೆಯ ಪತ್ರಿಕೆಯಾದರೂ ಅದರಲ್ಲಿ ವಿಶೇಷ ಸುದ್ದಿಗಳ ಸಾರ ಇರುತ್ತಿತ್ತು. ಕಾಂಗ್ರೆಸ್ ಚಳುವಳಿಗೆ ಮೀಸಲಾದ ಅರೆಯಾದ್ದರಿಂದ ತೀಕ್ಷ್ಣವಾದ ಲೇಖನಗಳಿಗೂ, ಹುರಿದುಂಬಿಸುವ ಘಟನೆಗಳಿಗೂ, ಖಂಡತುಂಡವಾದ ಅಗ್ರಲೇಖನಗಳಿಗೂ ಪೌರವಾಣಿ ಹೆಸರಾಯಿತು. ಹಿಂದೂಪುರದಲ್ಲಿ ೩೮ ದಿನಗಳ ಕಾಲ ನಡೆಯಿತು. ಈ ಪತ್ರಿಕೆಯ ಮುಖ್ಯ ಉದ್ದೇಶವಾಗಿದ್ದ ಜವಾಬ್ದಾರಿ ಸರ್ಕಾರ ಸ್ಥಾಪನೆ ಆದ ಮೇಲೆ ಈ ಪತ್ರಿಕೆಯನ್ನು ನಿಲ್ಲಿಸಲು ಎಂ.ಎನ್. ಜೋಯಿಸ್ ಮತ್ತು ಎಂ.ಎನ್. ಸೀತಾರಾಮಯ್ಯ ಅವರು ಸೂಚನೆ ಇತ್ತರು. ಪತ್ರಿಕೆಯಿಂದ ನಷ್ಟ ಆಗುತ್ತಿತ್ತು. ಈ ನಷ್ಟವನ್ನು ಭರಿಸಲು ಈ ಇಬ್ಬರೂ ಶಕ್ತಿಮೀರಿ ಶ್ರಮಿಸುತ್ತಿದ್ದರು.ಈ ಸೂಚನೆಗೆ ಕೆಲವರು ಒಪ್ಪಲಿಲ್ಲ. ಪೌರವಾಣಿ ಪತ್ರಿಕೆಯನ್ನು ಯಾರು ಬೇಕಾದರೂ ನಡೆಸಿಕೊಂಡು ಹೋಗಿ, ಅದನ್ನು ನಿಲ್ಲಿಸಲೇಬೇಕೆಂಬ ಹಠ ನಮಗೆ ಇಲ್ಲ ಎಂದು ಅವರಿಬ್ಬರೂ ಕೂಡ ಬಹಿರಂಗವಾಗಿಯೇ ಸ್ಪಷ್ಟಪಡಿಸಿದರು. ಮುಂದೆ ಹೆಚ್.ಎಸ್. ದೊರೆಸ್ವಾಮಿ ಅವರ ಸಂಪಾದಕತ್ವದಲ್ಲಿ ಈ ಪೌರವಾಣಿ ಪತ್ರಿಕೆಯು ಕೆಲವು ಕಾಲ ಮುಂದುವರೆಯಿತು.

ರಾಮನಾಥ ಗೋಯಂಕರ್ ಅವರು ಮೈಸೂರು ಚಲೋ ಚಳವಳಿಯ ಬಗೆಗೆ ಒಂದು ಲಕ್ಷ ಹಸ್ತ ಪ್ರತಿಗಳನ್ನು ಅಚ್ಚು ಹಾಕಿ ಮದ್ರಾಸ್‌ನಲ್ಲಿ ಆಯೋಜಿಸಲಾಗಿದ್ದಂತಹ ಶಿಬಿರದ ನೇತೃತ್ವವನ್ನು ವಹಿಸಿದ್ದ ಎಸ್.ಎನ್. ಗುಪ್ತರವರಿಗೆ ನೀಡಲಾಗಿತ್ತು. ಮದ್ರಾಸಿಗೆ ಹೋಗಿ ಎಸ್.ಎನ್. ಗುಪ್ತರವರೊಡನೆ ಸಮಾಲೋಚನೆ ಮಾಡಿ ಅದನ್ನು ಹಿಂದೂಪುರಕ್ಕೆ ತಂದು ಪೌರವಾಣಿ ತಂಡದ ಮುಖಾಂತರ ಸಂಸ್ಥಾನದಲ್ಲೆಲ್ಲಾ ಹಂಚುವ ಆಲೋಚನೆ ಮಾಡಿ ಮದರಾಸಿಗೆ ಹೋಗಿದ್ದರು. ಈ ಪತ್ರಿಕೆಯ ಹಸ್ತಪ್ರತಿಗಳನ್ನು ಬೆಂಗಳೂರಿನಿಂದ ಮೈಸೂರಿಗೆ ತರಲು ಎದುರಾದಂತಹ ಸಮಸ್ಯೆಯನ್ನು ಅವರು ಬಿಚ್ಚಿಟ್ಟಿದ್ದರು. ವೆಂಕಟರಾಮಯ್ಯ ಎಂಬುವರು ಅರಮನೆಯಲ್ಲಿ ಗುಮಾಸ್ತರಾಗಿದ್ದರು.ಅವರು ಬರುತ್ತಿದ್ದಂತಹ ಕಾರಿನಲ್ಲಿಯೇ ಮೈಸೂರಿಗೆ ಈ ಹಸ್ತಪ್ರತಿಗಳನ್ನು ತಂದು ಮೈಸೂರು ಕಾಂಗ್ರೆಸ್ ಸಮಿತಿಯ ನಾಯಕರಾಗಿದ್ದ ಚಲುವರಾಯಶೆಟ್ಟರ ಮನೆಯಲ್ಲಿ ಇಡುತ್ತಿದ್ದರು. ಅರಮನೆಯ ವಿರುದ್ಧದ ಸತ್ಯಾಗ್ರಹಕ್ಕೆ ಸಂಬಂಧಿಸಿದ ಹಸ್ತಪ್ರತಿಗಳನ್ನು ಅದೇ ಅರಮನೆಯ ಕಾರಿನಲ್ಲಿಯೇ ಸಾಗಿಸಿ ಮೈಸೂರಿಗೆ ತಂದಿರುವುದು ಒಂದು ಕೂತೂಹಲದ ಸಂಗತಿಯೇ ಆಗಿದೆ.



"ಮೈಸೂರು ಚಲೋ" ಚಳುವಳಿ ೧೦ ದಿನ ಇದೆ ಎನ್ನುವಾಗ ಶ್ರೀ ತಿರುಮಲೆ ತಾತಾಚಾರ್ಯಶರ್ಮರು ಮೈಸೂರಿನ ಆಡಳಿತ ವೈಖರಿಯನ್ನೂ, ಸರ್ಕಾರದ ನಿರಂಕುಶತೆಯನ್ನು ಆರ್ಕಾಟ್‌ರ ಪೂರ್ವೋತ್ತರವನ್ನೂ, ಮಹಾರಾಜರ ಸುತ್ತ ಇರುವ ದುಷ್ಟಶಕ್ತಿಗಳ ನಾಚಿಕೆಗೇಡಿನ ನಡತೆಯನ್ನೂ, ಜನತೆಯ ಬವಣೆಯನ್ನೂ ಕ್ರಾಂತಿಯತೆಗಳನ್ನೂ ಕುರಿತು ಏಕಪ್ರಕಾರವಾಗಿ ೧೦ ಸುದೀರ್ಘ ಲೇಖನಗಳನ್ನು ಬರೆದಿದ್ದರು. ಒಂದೊಂದೂ ಲೇಖನವೂ ಕೂಡ ಜನತೆಯಲ್ಲಿ ಚೇತನವನ್ನೂ, ಆವೇಶವನ್ನೂ ತುಂಬಿದವು. ೧೯೪೭ನೇ ಸೆಪ್ಟೆಂಬರ್ ೨೯ ರ ರಾತ್ರಿ ೮ ಘಂಟೆಗೆ ಸರ್ಕಾರ ಪೌರವಾಣಿ ಸಂಪಾದಕರ ಮೇಲೆ ಒಂದು ಆಜ್ಞೆ ಜಾರಿ ಮಾಡಿತು. ಇನ್ನು ಮುಂದೆ ಯಾವುದೇ ಲೇಖನ ಅಥವಾ ಅಗ್ರ ಲೇಖನವನ್ನು ಪತ್ರಿಕೆಯಲ್ಲಿ ಅಚ್ಚು ಮಾಡುವ ಮೊದಲು ಸರ್ಕಾರದ ಚೀಫ್ ಸೆಕ್ರೆಟರಿಯವರಿಗೆ ತೋರಿಸಿ ಅವರ ಸಮ್ಮತಿ ಪಡೆದು ಅವನ್ನು ಪ್ರಕಟಿಸಬೇಕು' ಎಂದು ತಿಳಿಸಲಾಯಿತು. ಅಂದಿಗಾಗಲೇ ಶ್ರೀ ತಾತಾಚಾರ್ಯಶರ್ಮರ ಎಂಟು ಲೇಖನಗಳನ್ನು ಪ್ರಕಟಿಸಿದ್ದರು. ಒಂಭತ್ತನೇ ಲೇಖನ ಅಂದು ರಾತ್ರಿ ಆಚ್ಚಿಗೆ ಹೋಗ ಬೇಕಾಗಿತ್ತು. ಸರ್ಕಾರದ ಈ ಆಜ್ಞೆಗೆ ತಲೆಬಾಗಬಾರದೆಂಬ ನಿರ್ಧಾರಕ್ಕೆ ಬಂದು ಒಂಭತ್ತನೇ, ಹತ್ತನೇ ಲೇಖನಗಳನ್ನು ಸರ್ಕಾರದ ಚೀಫ್ ಸೆಕ್ರೆಟರಿಯವರ ಗಮನಕ್ಕೆ ತರದೆಯೇ ಪ್ರಕಟಿಸಿದರು.

ಸ್ವಾತಂತ್ರ್ಯ ಚಳವಳಿಯ ಸತ್ಯಾಗ್ರಹಿಗಳಲ್ಲಿ ಮುಖ್ಯಸ್ಥರಾಗಿದ್ದ ಎಸ್.ಎನ್. ಗುಪ್ತಾ ಅವರು ಪೋಲಿಸರ ಕಣ್ಣು ತಪ್ಪಿಸಿ, ಭೂಗತವಾಗಿ ತಮ್ಮ ಕೆಲಸವನ್ನು ಬಲು ನಿಷ್ಠೆಯಿಂದಲೇ ನಿರ್ವಹಿಸುತ್ತಿದ್ದರು. ಇವರು ಮೈಸೂರಿನಲ್ಲಿ ನಡೆಯ ಬೇಕಾದ ಕೆಲಸ ಕಾರ್ಯಗಳನ್ನು ಭೂಗತವಾಗಿಯೇ ನಿರ್ವಹಿಸುತ್ತಿದ್ದರು. ಅಂದು ಸರ್ಕಾರವು ನಗರದಲ್ಲಿನ ಉಪಹಾರ ಮಂದಿರಗಳು ಹಾಗೂ ಹೋಟೆಲ್‌ಗಳನ್ನು

ಕೆಲವು ಕಾಲ ಮುಚ್ಚಲು ಆಜ್ಞೆ ಹೊರಡಿಸಿದರು.ಇದರ ಪರಿಣಾಮವಾಗಿ ಮೈಸೂರಿಗೆ ಬರುವ ಜಾಥಾಗಳು ಮತ್ತು ಸತ್ಯಾಗ್ರಹಿಗಳಿಗೆ ಊಟ, ವಸತಿಗಳು ದೊರಕದ ರೀತಿಯಲ್ಲಿ ನೋಡಿ ಕೊಳ್ಳಲಾಗಿತ್ತು. ಇದರ ಬಗೆಗೆ ಎಸ್.ಎನ್. ಗುಪ್ತಾ ಅವರು ಮತ್ತು ಇತರೆ ಸತ್ಯಾಗ್ರಹಿ ನಾಯಕರುಗಳು ಏರ್ಪಾಡು ಮಾಡ ಬೇಕಾಗಿತ್ತು. ಆ ಕಾರಣವಾಗಿಯೇ ಮೈಸೂರಿನ ನಾಗರೀಕರು ಈ ವಿ?ಯದಲ್ಲಿ ಸಂಪೂರ್ಣವಾದಂತಹ ಸಹಕಾರವನ್ನೇ ಕೊಟ್ಟಿದ್ದರು. ನೂರಾರು ಸಂಸಾರಗಳು ಕಾಂಗ್ರೆಸ್ ಸಮಿತಿಯ ಸ್ವಯಂ ಸೇವಕರನ್ನು ತಮ್ಮ ತಮ್ಮ ಮನೆಗಳಲ್ಲಿ ಇಟ್ಟುಕೊಂಡು ಅವರಿಗೆ ಊಟ ಹಾಕುವುದಾಗಿ ಮುಂದೆ ಬಂದರು. ಹೀಗೆ ಮೈಸೂರಿನಲ್ಲಿನ ಅರಮನೆಯ ಮುಂದೆ ಮಾಡಿರುವಂತಹ ಸತ್ಯಾಗ್ರಹ ಚಳುವಳಿಗೆ ಎಲ್ಲಾ ರೀತಿಯಲ್ಲೂ ಕೂಡ ಸಜ್ಜಾಗಿತ್ತು. ಮೈಸೂರು ಚಲೋ ಕಾರ್ಯಕ್ರಮಕ್ಕೆ ಬೆಂಬಲ ಪಡೆಯಲು ಹಿಂದೂಪುರದಲ್ಲಿ ಒಂದು ಸತ್ಯಾಗ್ರಹದ ಶಿಬಿರ ತೆರೆಯಲಾಯಿತು. ಅದರ ಮುಖ್ಯಸ್ಥರಾಗಿ ಕೆ.ಆರ್.ಶ್ರೀಧರಮೂರ್ತಿ ಅವರನ್ನು, ಮದ್ರಾಸಿನಲ್ಲಿ ಒಂದು ಶಿಬಿರವನ್ನು ತೆರೆಯಲಾಗಿತ್ತು ಅದರ ಮುಖ್ಯಸ್ಥರಾಗಿ ಎಸ್. ಎನ್. ಗುಪ್ತಾ, ಹುಬ್ಬಳ್ಳಿಯಲ್ಲಿ ತೆರೆಯಲಾಗಿದ್ದ ಶಿಬಿರದ ಮುಖ್ಯಸ್ಥರಾಗಿ ಆರ್.ಎಸ್. ಆರಾಧ್ಯ ಅವರುಗಳನ್ನು ನೇಮಕ ಮಾಡಲಾಗಿತ್ತು. ಈ ಶಿಬಿರಗಳು ಬಹುಮುಖ್ಯವಾಗಿ ಆ ಪ್ರದೇಶದಲ್ಲಿನ ಜನರ ಸಹಕಾರ, ಸಹಾಯಕ್ಕಾಗಿ ತಕ್ಕ ಕಾರ್ಯಕ್ರಮವನ್ನು ಹಾಕಿಕೊಂಡು ಕಾರ್ಯನಿರ್ವಹಿಸುತ್ತಿದ್ದರು. ಮದರಾಸಿನಲ್ಲಿ ಇದ್ದ ಎಸ್. ಎನ್. ಗುಪ್ತಾ ಅವರು ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯ ಆರ್.ಎನ್. ಗೋಯಂಕಾರ ಅವರನ್ನು ಭೇಟಿಯಾಗಿ, ಅವರ ಸಹಕಾರವನ್ನೂ ಮತ್ತು ಸಂಪೂರ್ಣವಾದ ಸಹಾಯವನ್ನೂ ಕೂಡ ಕೋರಿದ್ದರು. ಅದಕ್ಕೆ ಪತ್ರಕರ್ತರಾದ ಗೋಯಂಕ್ ಅವರು ಸಂಪೂರ್ಣ ಸಹಕಾರವನ್ನು ಕೊಡುವುದಾಗಿ ಭರವಸೆಯನ್ನು ಇದೇ ಕಾಲ ಸಂದರ್ಭದಲ್ಲಿ ಕೊಟ್ಟಿದ್ದರು. ಮೈಸೂರು ಚಲೋ ಚಳುವಳಿಗೆ ಅಗತ್ಯವಾಗಿ ಬೇಕಾದ ಹಸ್ತ ಪತ್ರಿಕೆಗಳನ್ನು ಗೋಯಂಕ್ ಅವರೇ ಲಕ್ಷಗಟ್ಟಲೆ ಮುದ್ರಿಸಿಕೊಟ್ಟರು. ಹಿಂದೂಪುರದಲ್ಲಿ ನಡೆಯುತ್ತಿದ್ದ ಪೌರವಾಣಿ ಪತ್ರಿಕೆಗೂ ಕೂಡ ಅಗತ್ಯವಾಗಿ ಬೇಕಾದಂತಹ ಕಾಗದವನ್ನು ಪೂರೈಸಿದ್ದರು. ❑

**ರಾಮಸ್ವಾಮಿ ವೃತ್ತಕ್ಕೆ ಸಂಬಂಧಿಸಿದ ಛಾಯಾಚಿತ್ರಗಳು**



**ಹುತಾತ್ಮ ರಾಮಸ್ವಾಮಿಯ ಸ್ಮಾರಕ**



**ರಾಮಸ್ವಾಮಿ ವೃತ್ತ**



**ಹಾರ್ಡ್ವಿಕ್ ಶಾಲೆ**




ಸಾಧ್ವಿ ಪತ್ರಿಕೆ – ೧೪–೧೦–೧೯೪೭





ಸಾಧ್ವಿ ಪತ್ರಿಕೆ –೦೫–೦೯–೧೯೪೭






ಸಾಧ್ವಿ ಪತ್ರಿಕೆ – ೦೬–೦೯–೧೯೪೭



## ಗ್ರಂಥಸೂಚಿ


೧. ಕೃಷ್ಣರಾವ್ ಎಂ.ವಿ, ಕೇಶವಭಟ್.ಎಂ, ಕರ್ನಾಟಕ ಇತಿಹಾಸ ದರ್ಶನ, ಕರ್ನಾಟಕ ಸಹಕಾರಿ ಪ್ರಕಾಶನ, ಬೆಂಗಳೂರು.

೨. ಜೋಯಿಸ್ ಎಂ.ಎನ್ (ಸಂ), ಕರ್ಮಯೋಗಿ ತಗಡೂರು ರಾಮಚಂದ್ರರಾಯರ ಆತ್ಮಕಥನ ಮತ್ತು ಅಭಿನಂಧನಾ ಗ್ರಂಥ, ಧ್ಯಾನ ಜೀವಿ ಕರ್ಮಯೋಗಿ, ತ.ರಾ.ರಾವ್. ಟ್ರಸ್ಟ್, ಮೈಸೂರು, ೧೯೭೪.

೩. ದೊರೆಸ್ವಾಮಿ.ಎಚ್.ಎಸ್, ಸ್ವಾತಂತ್ರ್ಯ ಸೇನಾನಿ (ಎಂ.ಎನ್.ಜೋಯಿಸ್ ಆತ್ಮಕಥನ), ಸಾಹಿತ್ಯ ಮಂದಿರ, ಎನ್.ಆರ್.ಕಾಲೋನಿ, ಬೆಂಗಳೂರು, ೧೯೯೯.

೪. ವೀರತ್ತಪ್ಪ. ಕೆ, ಮೈಸೂರು ಸಂಸ್ಥಾನ ಸ್ವಾತಂತ್ರ್ಯ ಚಳವಳಿ, ವಿಜಯರವಿ ಪ್ರಕಾಶನ, ಬೆಂಗಳೂರು, ೧೯೭೭.

೫. ಸೂರ್ಯನಾಥ್. ಯು.ಕಾಮತ್, ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂಪುಟ ೨.

೬. ಅಗರಂ ರಂಗಯ್ಯ, ಸಾಧ್ವಿ ಪತ್ರಿಕೆ, ಮೈಸೂರು, ಆಗಸ್ಟ್ ಮತ್ತು ಸೆಪ್ಟಂಬರ್ ೧೯೪೭.

೭. ಸೂರ್ಯನಾಥ್.ಯು.ಕಾಮತ್, ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂಪುಟ–೩.

೮. ಸುರೇಶ್.ಎ.ಎನ್, ಮೈಸೂರು ಸಂಸ್ಥಾನದಲ್ಲಿ ರಚನಾತ್ಮಕ ಕಾರ್ಯಕ್ರಮಗಳು, ರಚನಾ ಪ್ರಕಾಶನ, ಮೈಸೂರು, ೨೦೧೧.

೯. ಅಗರಂ ರಂಗಯ್ಯ, ಸಾಧ್ವಿ ಪತ್ರಿಕೆ, ಮೈಸೂರು, ಅಕ್ಟೋಬರ್ ೧೯೪೭.

೧೦. ರಾಮಣ್ಣ.ಕೆ, (ಸಂ), ಸೋಲಿಲ್ಲದ ಸರದಾರರು ಸ್ವಾತಂತ್ರ್ಯಕ್ಕಾಗಿ ದುಡಿದ ಧೀರರು, ಭಾರತೀಯ ಪ್ರಕಾಶನ, ಮೈಸೂರು, ೨೦೦೮.

೧೧. ಚಂದ್ರಶೇಖರ್.ಎಸ್, ಆಧುನಿಕ ಕರ್ನಾಟಕ ಆಂದೋಲನಗಳು, ಮೈತ್ರಿ ಪ್ರಕಾಶನ, ಬೆಂಗಳೂರು, ೨೦೦೨.

೧೨. ಕರ್ನಾಟಕ ಸರ್ಕಾರ, ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಮೈಸೂರು ಜಿಲ್ಲೆ, ೧೯೮೮.

೧೩. ಶ್ರೀ ಈಚನೂರ್ ಕುಮಾರ್, ಪತ್ರಕರ್ತರ ಟಿಪ್ಪಣಿಗಳು.

❖ ❖ ❖

## ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ
## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳೆಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಯ ಶೆಟ್ಟಿ | ೩೦/– |
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |

| | | | |
|---|---|---|---|
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |



| | | | |
|---|---|---|---|
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ನೆಹರು ಮೈದಾನ | ಡಾ. ವಸಂತ ಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೋಮೆಯಂಡ ಕೌಸಲ್ಯ ಸತೀಶ್ | ೩೦/– |
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |

| | | | |
|---|---|---|---|
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಸತೀಶ ಕೆ. | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |